ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 1 ಸಂಚಿಕೆ : 17 ಡಿಸೆಂಬರ್ 1 ರಿಂದ 15–1997 ಪುಟಗಳು : 24 ರೂ. 5



ರೇಖಾಚಿತ್ರ : ಭಾನುಪ್ರಕಾಶ್ ಕೊಳಂಬೆ

"ಪೊಲಿ ಪೊಲಿಯೇ ಬಾ...."

ಹುತ್ತರಿ, ನಾಡಿಗೆ ಶುಭ ಸಂತೋಷ ತರಲಿ

ಕೊಡಗು ಗೌಡ ವಿದ್ಯಾ ಸಂಘದ ಕಟ್ಟಡಕ್ಕೆ ಹಾನಿ–ಖಂಡನೆ

ವಿವಾಹ ಸಮಾರಂಭವೊಂದರಲ್ಲಿ ನಡೆದ ಕಲಹದ ಸಂದರ್ಭದಲ್ಲಿ ಕೆಲವು ಕಿಡಿಗೇಡಿಗಳು ಮಡಿಕೇರಿ ಗೌಡ ವಿದ್ಯಾ ಸಂಘದ ಕಟ್ಟಡದ ಮೇಲೆ ತಮ್ಮ ಕೋಪವನ್ನು ತೋರಿಸಿಕೊಂಡ ಪರಿಣಾಮ ಕಟ್ಟಡದ ಹಲವಾರು ಗಾಜುಗಳು ಮತ್ತು ಕಿಟಕಿಗಳು ಜಖಂಗೊಂಡಿರುವುದು "ಸಂಗಾತಿ"ಗೆ ಕಂಡು ಬಂದಿದೆ. ಇದನ್ನು "ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ" ತೀವ್ರವಾಗಿ ಖಂಡಿಸಿದೆ.

ಅಕಾಡೆಮಿಯ ಪ್ರಥಮ ಕಾರ್ಯಕಾರಣಿ ಸಭೆ

ದಿನಾಂಕ 30–11–97ನೇ ಭಾನುವಾರ "ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ"ಯು ತನ್ನ ಮೊದಲ ಸಭೆ "ಕೊಡಗು ಗೌಡ ವಿದ್ಯಾ ಸಂಘ"ದಲ್ಲಿ ನಡೆಯಿತು. ಅಕಾಡೆಮಿಯ ಕಾರ್ಯದರ್ಶಿ ಕೋಡಿ ಚಂದ್ರಶೇಖರ್‌ರವರು ವರದಿ ವಾಚಿಸಿದರು. ಸಂಘದ ನೊಂದಾವಣೆಯ ಬಗ್ಗೆ, ಸಭೆಯ ಕಾರ್ಯಕಲಾಪಗಳನ್ನು ನಡೆಸುವ ನಿಯಮಗಳ ಬಗ್ಗೆ ಸವಿವರವಾಗಿ ವಿವರಣೆ ನೀಡುತ್ತಾ ಸಂಘದ ಬೈಲಾವನ್ನು ಚರ್ಚೆಗಾಗಿ ಸಭೆಯ ಮುಂದಿಟ್ಟರು. ಸಭೆಯು ಸೂಕ್ತವಾಗಿ ಚರ್ಚಿಸಿ ತನ್ನ ಅನಿಸಿಕೆಯನ್ನು ಪದಾಧಿಕಾರಿಗಳ ಮುಂದಿಟ್ಟಿತು. ಜನಾಂಗದ ಸರ್ವಾಂಗೀಣ ಅಭಿವೃದ್ಧಿಗೆ ಈ ಸಂಘಟನೆಯು ಪಣತೊಟ್ಟಿತು.

"ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ" ವತಿಯಲ್ಲಿ ಮಡಿಕೇರಿಯಲ್ಲಿ ಹುತ್ತರಿ ಹಬ್ಬದ ಆಚರಣೆ

ದಿನಾಂಕ 13–12–97 ನೇ ಶನಿವಾರ ಯಾಲದಾಳು ಗಣಪತಿಯವರ ಗದ್ದೆಯಿಂದ ಕದಿರು ತಂದು ವಿದ್ಯಾ ಸಂಘದಲ್ಲಿ ರಾತ್ರಿ 9–00 ಗಂಟೆಗೆ ಕದಿರು ವಿತರಿಸಲಾಗುವುದು. ಅಲ್ಲದೆ, ಸರ್ವ ಗೌಡ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಅಕಾಡೆಮಿಯ ಕಾರ್ಯದರ್ಶಿ ಕೋಡಿ ಚಂದ್ರಶೇಖರ್ ತಿಳಿಸಿದ್ದಾರೆ.

ಸಂಚಿಕೆ 16, ಪುಟ 11ರಲ್ಲಿ ತಿದ್ದುಪಡಿ

"ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ" ರಚನೆ

ಖಜಾಂಚಿಯಾಗಿ ಮುಂಡೋಡಿ ಭರತ್ ಅನ್ನು ಪಳ್ಳಿಪುರ ಭರತ್ ಎಂತಲೂ ಪದಾಧಿಕಾರಿಯಾಗಿ ಕುಂಭಗೌಡನ ರಂಜಿತ್ ಅನ್ನು ಕುಂಭಗೌಡನ ಸುನಿಲ್ ಎಂತಲೂ ಪ್ರಿಯ ಓದುಗರು ಓದಿಕೊಳ್ಳುವುದು.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟೆಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರಿತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟೆಡ ಎಲ್. ಶಿವಕುಮಾರ್

ಕಾರ್ಯ ನಿರ್ವಾಹಕಿ :
ಕು॥ ಗೀತಾ ಮೋಂಟಡ್ಕ

ಪತ್ರಿಕಾ ಪ್ರತಿನಿಧಿ :
ಕು॥ ಧನು ಚೆರಿಯಮನೆ

ಕಛೇರಿ ನಿರ್ವಹಣೆ :
ಪಟ್ಟೆಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮಣ್ಣೂಪುರ ಧರಣಿ ಗಣಪತಿ

ಮುದ್ರಕರು :
ಮಣ್ಣಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,

ಗೌರವ ಸಂಪಾದಕ :
ಪಟ್ಟೆಡ ಎಂ. ಪ್ರಭಾಕರ್

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 322, ಹಿನಕಲ್ ಗ್ರಾಮ ಮತ್ತು
ಅಂಚೆ [ಅರಳಿಕಟ್ಟೆ ಹತ್ತಿರ]
ಮೈಸೂರು–570 017.
ದೂರವಾಣಿ : **0821–516771**

ಒಳನೋಟ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ

ಅರೆಭಾಷೆಗೊಂದು ಅಕಾಡೆಮಿ

ಒಬ್ಬ ವ್ಯಕ್ತಿ ತನ್ನ ಅಭಿಪ್ರಾಯವನ್ನು ಮಾತಿನ ಮುಖಾಂತರ ವ್ಯಕ್ತಪಡಿಸುವ ಮಾಧ್ಯಮಕ್ಕೆ "ಭಾಷೆ" ಎಂದು ಕರೆಯುತ್ತೇವೆ. ಈ ಭಾಷೆ ಒಂದು ಪ್ರದೇಶದ ಜನರಾಡುವ ಮಾತಾಗಿರುವುದಲ್ಲದೆ ಒಂದು ಜಾತಿಯವರು ಆಡುವ ಮಾತು ಎಂಬುದಾಗಿ ಹೇಳಿದರೆ ಸರಿಯಲ್ಲವೆಂದು ಅನಿಸುತ್ತದೆ. ಉದಾಹರಣೆಗೆ ಅಯ್ಯಂಗಾರರು ತಮಿಳು ಭಾಷೆಯನ್ನಾಡುವವರು ಇರುತ್ತಾರೆ. ತೆಲುಗು ಭಾಷೆಯನ್ನಾಡುವವರು ಸಹ ಇದ್ದಾರೆ. ಅದೇ ರೀತಿ ಬಂಟರು ತುಳು ಮಾತಾಡುವವರೂ ಇದ್ದಾರೆ. ಕನ್ನಡ ಮಾತಾಡುವವರೂ ಇದ್ದಾರೆ. ಕನ್ನಡ ಜಿಲ್ಲೆಗಳಲ್ಲಿ ಮತ್ತು ಕೊಡಗಿನಲ್ಲಿ ಗೌಡರು ಅರೆಭಾಷೆಯನ್ನು ಆಡುತ್ತಾರೆ. ತುಳು ಭಾಷೆಯನ್ನು ಆಡುತ್ತಾರೆ. ಕನ್ನಡ ಭಾಷೆಯನ್ನು ಆಡುತ್ತಾರೆ.

ಇದರ ವ್ಯತಿರಿಕ್ತವಾಗಿ ಕೊಂಕಣಿ ಮಾತನಾಡುವವರು ಸಾರಸ್ವತರು, ಗೌಡಸಾರಸ್ವತರು, ಕ್ರಿಶ್ಚಿಯನ್ನರು, ಅಕ್ಕಸಾಲಿಗರು ಇದ್ದಾರೆ. ಆದ್ದರಿಂದ ಕೊಂಕಣಿ ಮಾತಾಡುವವರೆಲ್ಲರೂ ಒಂದೇ ಜಾತಿಯವರಲ್ಲ. ಹಾಗೆಯೇ ಕೊಡಗು ಭಾಷೆಯನ್ನು ಅಮ್ಮ ಕೊಡವರು, ಕೊಡವರು, ಹೆಗ್ಗಡೆಗಳು, ಗೊಲ್ಲರು, ಐರಿಗಳು, ಮಡಿವಾಳರು, ಮೇದರು, ಕೆಂಬಟ್ಟಿಗಳು, ಕುಡಿಯರು ಆಡುತ್ತಾರೆ. ಆದುದರಿಂದ ಕೊಡಗು ಭಾಷೆ ಒಂದು ಜಾತಿಯ ಭಾಷೆಯಲ್ಲ. ಅದು ಒಂದು ಪ್ರದೇಶದ ಭಾಷೆ.

ಅದೇ ರೀತಿ ಅರೆಭಾಷೆ ಮಾತನಾಡುವರೆಲ್ಲರೂ ಗೌಡರಲ್ಲ ,ಕಾರಣವೆಂದರೆ ಅರೆಭಾಷೆಯನ್ನು ಗೌಡರು, ಹಾಲು ಒಕ್ಕಲು ಮಕ್ಕಳು, ಹಾಲಕ್ಕಿ ಒಕ್ಕಲ್, ಹವೀಕರು, ಜೇನುಕುರುಬರು, ಸೋಲಿಗರು, ಕುಂಬಾರರು ಈ ಭಾಷೆಯನ್ನು ಆಡುತ್ತಾರೆ.

ಅರೆಭಾಷೆಯು ಒಂದು ಪ್ರಾದೇಶಿಕ ಪ್ರಾಚೀನ ಭಾಷೆಯಾಗಿದ್ದು ಯಾವುದೋ ಒತ್ತಡಕ್ಕೆ, ಆಕ್ರಮಣಕ್ಕೆ ತುಳಿಯಲ್ಪಟ್ಟು ಸಂಕುಚಿಸಿಕೊಂಡರೂ ಸಹ ಕನ್ನಡ ಜಿಲ್ಲೆಗಳ ಮತ್ತು ಕೊಡಗಿನಲ್ಲಿ ಒಂದು ಅಂದಾಜಿನ ಪ್ರಕಾರ ಐದು ಲಕ್ಷಕ್ಕೂ ಹೆಚ್ಚು ಜನರಿದ್ದಾರೆ ಎನ್ನುವ ಈ ಭಾಷಿಕರ ಮಾತೃಭಾಷೆಯಾದ ಈ ಅರೆಭಾಷೆಗೆ ಒಂದು ಅಕಾಡೆಮಿಯೊಂದು ಇರುವುದು ಉಚಿತವಲ್ಲವೆ ? ಪ್ರಾಚೀನವಾದ ಈ ಭಾಷೆ ಸಂಶೋಧನೆಗೆ ನವ ಯುವ ಪೀಳಿಗೆ ಮುಂದೆ ಬಂದಾಗ ಅದೊಂದು ಮಹತ್ತರ ತಿರುವು ಆಗಬಹುದಲ್ಲವೇ ?

ಹುತ್ತರಿ ಹಬ್ಬ

ಹುತ್ತರಿ ಹಬ್ಬ ಕೊಡಗಿನಲ್ಲಿ ಆಚರಿಸುವ ಸಂಭ್ರಮದ ಹಬ್ಬ. ತಮಿಳು ನಾಡು ಕೇರಳದಲ್ಲಿ ಆಚರಿಸುವ ಓಣಂ ಹಬ್ಬದಂತೆ ಕೊಡಗಿನಲ್ಲಿ ಹೊಸ ಭತ್ತವನ್ನು ಮನೆಗೆ ತೆಗೆದುಕೊಂಡು ಬರುವ ಸಮಯದಲ್ಲಿ ಆಚರಿಸುವ ಹಬ್ಬ. ಈ ಹಬ್ಬವನ್ನು ಆಚರಿಸಿದ ನಂತರವೇ ಬೆಳೆ ಕುಯ್ಲಿಗೆ ಪ್ರಾರಂಭ ಮಾಡಬೇಕೆಂಬ ಪದ್ಧತಿ ಹಿಂದೆ ಇತ್ತು. ಆದರೆ ಈಗ ವಿವಿಧ ರೀತಿಯ ಭತ್ತವನ್ನು ಬೆಳೆಯುವುದರಿಂದ ಈ ಕಟ್ಟಳೆಗೆ ಬದ್ಧವಾಗಿರುವುದಿಲ್ಲ. ಹುತ್ತರಿ ಹಬ್ಬದಲ್ಲಿ ಪ್ರತಿಯೊಬ್ಬರೂ ಮನೆಯನ್ನು ಸಾರಿಸಿ, ಸುಣ್ಣ ಲೇಪಿಸಿ ಮನೆಯ ಅಂಗಳ, ಓಡಾಡುವ ದಾರಿ, ಭತ್ತದ ಕಣ ಮುಂತಾದವುಗಳನ್ನು ಶುಚಿಗೊಳಿಸಿ, ಅಂಗಳ ಕಣಕ್ಕೆ ಸಗಣಿ ಸಾರಿಸಿ, ರಂಗೋಲೆ ಬಳಿದು ಶೃಂಗರಿಸುತ್ತಾರೆ. ಮನೆಯನ್ನು ತಳಿರು ತೋರಣ, ಚೆಂಡು ಹೂವಿನಿಂದ ಅಲಂಕರಿಸುತ್ತಾರೆ. ಆಯಾ ಕುಟುಂಬದ ಐನ್‌ಮನೆ [ಮೂಲ ಮನೆ] ಯಲ್ಲಿ ಸಾಯಂಕಾಲ ಎಲ್ಲರೂ ಸೇರಿ ಫಲಹಾರವನ್ನು ಮಾಡಿದ ನಂತರ ಕುಂಬಳ ಮರದ ಎಲೆ, ಗೇರದ ಮರದ ಎಲೆ, ಮಾವಿನ ಮರದ ಎಲೆ, ಆಲದ ಮರದ ಎಲೆ ಮತ್ತು ಹಲಸಿನ ಮರದ ಎಲೆಯನ್ನು ಒಂದರ ಮೇಲೊಂದು ಇಟ್ಟು ಸುರಳಿ ಮಾಡುತ್ತಾರೆ. ಸುರಳಿ ಮಾಡುವ ಸಂದರ್ಭದಲ್ಲಿ ಮನೆಯ ಗಂಡಸರೆಲ್ಲಾ ಸೇರಿ "ಪೊಲಿ ಪೊಲಿಯೇ" ಬಾ ಎಂಬುದಾಗಿ ಜೋರಾಗಿ ಕೂಗುತ್ತಾ ನೆರೆಕಟ್ಟುತ್ತಾರೆ. ಮಕ್ಕಳು ಪಟಾಕಿ ಹತ್ತಿಸಿ ಆನಂದದಿಂದ ಓಡಾಡುತ್ತಿರುತ್ತಾರೆ. ನಂತರ ಹೊಸ ಬಟ್ಟೆಯನ್ನು ತೊಟ್ಟು ಗ್ರಾಮದವರೆಲ್ಲಾ ಸೇರಿ ಕದಿರು ತೆಗೆಯುವುದಾದರೆ ದೇವಸ್ಥಾನಕ್ಕೆ ಹೋಗಿ ಕದಿರು ತೆಗೆದುಕೊಂಡು ಬರುತ್ತಾರೆ. ನಂತರ ಮನೆಯ ಯಜಮಾನನು ಕದಿರು ಗುತ್ತಿ ಎಂಬ (ಬಿದುರಿನ ಗುತ್ತಿ) ಅಲಂಕರಿಸಿದ ಗುತ್ತಿ ಅಥವಾ ಚೆಂಬನ್ನು ತೆಗೆಯುವುದಕ್ಕೆ ಮೊದಲು ಕುಟುಂಬದ ಅಡಿಗೆ ಮನೆಯಲ್ಲಿ [ಉಂಬೊಳಗೆ] ಸೇರಿ ದೇವರನ್ನು ಪ್ರಾರ್ಥಿಸಿ ನೆಲ್ಲಕ್ಕಿಗೆ ಅಕ್ಕಿ ಹಾಕಿ ಎಲ್ಲರೂ ಯಜಮಾನ ಯಜಮಾನತಿಗೆ ಮರ್ಯಾದೆ ಕೊಡುವುದಕ್ಕಾಗಿ ಕಾಲು ಮುಟ್ಟಿ ನಮಸ್ಕರಿಸುತ್ತಾರೆ. ಕಿರಿಯರು ಹಿರಿಯರ ಕಾಲನ್ನು ಮುಟ್ಟಿ ನಮಸ್ಕರಿಸಿ ಪೊಲಿ

[4ನೇ ಪುಟಕ್ಕೆ ಮುಂದುವರೆದಿದೆ]

ಕಾಯಕದಿಂದ ಜನನಾಯಕರಾದ ಮುಕ್ಕಾಟಿ ಚಂಗಪ್ಪ ವಾಸುದೇವ್

ಇಂದು ಪ್ರಚಾರ ಪ್ರಿಯರಿಗೇನೂ ಕೊರತೆಯಿಲ್ಲ. ಯಾರೋ ಮಾಡಿದ ಕೆಲಸವನ್ನು ತಾವೇ ಮಾಡಿದ್ದೆಂದು, ಕೈಲಾಗದ ಕೆಲಸಗಳಿಗೆ ಗುದ್ದಲಿಪೂಜೆ ಮಾಡಿಸಿ, ಒಳ್ಳೆಯ ಕೆಲಸ ಮಾಡಲಾಗದಿದ್ದರೆ ಪುಂಡಾಟಗಳನ್ನು ಮಾಡಿಯಾದರೂ ಪ್ರಚಾರ ಗಿಟ್ಟಿಸುವವರು ಬಹಳಷ್ಟು ಮಂದಿಯಿದ್ದಾರೆ. ಆದರೆ 'ಕಾಯಕವೇ ಕೈಲಾಸ', ಜನಸೇವೆಯೇ ನಿಜವಾದ ಪ್ರಚಾರ, ಸಮಾಜ ಸೇವೆ ಕೈಯಿಂದ ನಡೆಯಬೇಕೇ ಹೊರತು ಬಾಯಿಯಿಂದ ಅಲ್ಲ ಎಂದು ನಂಬಿದ ನಮ್ಮ ಜನಾಂಗದ ಮೇರು ವ್ಯಕ್ತಿಯೇ ಮುಕ್ಕಾಟಿ ಚಂಗಪ್ಪ ವಾಸುದೇವ್.

ಹಿರಿಯ ವಕೀಲರಾಗಿ, ಮಡಿಕೇರಿಯ ಪ್ರಥಮ ಪ್ರಜೆಯಾಗಿ, ಸಮಾಜ ಸೇವಕನಾಗಿ ಎಲ್ಲರಿಗೂ ಚಿರಪರಿಚಿತರಾಗಿರುವ ಎಂ.ಸಿ. ವಾಸುದೇವ್‌ರವರನ್ನು 'ಕೊಡಗು ಸಂಗಾತಿ'ಯು ಸಂದರ್ಶಿಸಲು ಬಹಳ ಸಂತಸದಿಂದಲೇ ಅವರ ಮನೆಯತ್ತ ಹೆಜ್ಜೆ ಹಾಕಿತ್ತು. ಆದರೆ ಎಂದೂ ಪ್ರಚಾರ ಬಯಸದ ಅವರು 'ಸಂದರ್ಶನ ನೀಡಲಾರೆ' ಎಂದು ಬಿಟ್ಟಾಗ 'ಸಂಗಾತಿ' ತಬ್ಬಿಬ್ಬಾಗಬೇಕಾಯಿತು. ತಕ್ಷಣ ಸುಧಾರಿಸಿಕೊಂಡು ಅವರೊಡನೆ ಔಪಚಾರಿಕವಾಗಿ ಮಾತನಾಡಿ ಅವರಂತರಾಳವನ್ನು ಭೇದಿಸುವಲ್ಲಿ ಯಶಸ್ವಿಯಾಯಿತು. ಆಗ ನಡೆದ ಸಂಭಾಷಣೆಯನ್ನು ನಿಮ್ಮ ಮುಂದಿಡುತ್ತಿದ್ದೇವೆ.

ಕೊಡಗು ಸಂಗಾತಿ : ನಮ್ಮ ಪತ್ರಿಕೆಗೆ ದಯವಿಟ್ಟು ಸಂದರ್ಶನ ನೀಡಿ.

ಉತ್ತರ : ದಯವಿಟ್ಟು ಕ್ಷಮಿಸಿ, ನಾನು ಸಂದರ್ಶನ ನೀಡಲಾರೆ. ಯಾವ ಪತ್ರಿಕೆಗೂ ಸಂದರ್ಶನ ನೀಡಿಲ್ಲ. ನನಗೆ ಪ್ರಚಾರ ಬೇಡವೇ ಬೇಡ. ಬೇರೆ ವಿಚಾರದಲ್ಲಿ ಏನು ಬೇಕಾದರೂ ಸಹಕಾರ ನೀಡುತ್ತೇನೆ. ಬೇಕಾದಷ್ಟು ಕೆಲಸಗಳನ್ನು ಮಾಡಿದ್ದೇನೆ. ಅದನ್ನು ಹೇಳಿಕೊಳ್ಳುವ ಅಗತ್ಯವೇನಿದೆ? ನನ್ನ ಬಗ್ಗೆ ಹೇಳಿಕೊಳ್ಳಲು ನಾನು ಇಷ್ಟಪಡುವುದಿಲ್ಲ. ದಯವಿಟ್ಟು ಏನೂ ಬರೆಯಬೇಡಿ.



ಮುಕ್ಕಾಟಿ ಚಂಗಪ್ಪ ವಾಸುದೇವ್

ಸಂ : ನೀವು ಜನಾಂಗಕ್ಕೆ ಮಾರ್ಗದರ್ಶನ ನೀಡಬಹುದಲ್ಲ ?

ಉ : ಎಲ್ಲರೂ ಅವರವರ ಕಾರ್ಯ ನಿರ್ವಹಿಸಲು ಸಮರ್ಥರಾಗಿದ್ದಾರೆ. ನಾನು ಮಾರ್ಗದರ್ಶನ ನೀಡಿ ಯಾರನ್ನೂ ನಿಯಂತ್ರಿಸಲಾರೆ, ನಿಯಂತ್ರಿಸಲೂಬಾರದು ಸ್ವತಂತ್ರವಾಗಿ ಬೆಳೆಯುವ ಮರದ ಕೊಂಬೆ ರೆಂಬೆಗಳನ್ನು ಕತ್ತರಿಸಲು ಹೋಗಲಾರೆ. ಅವರವರ ದಾರಿಯಲ್ಲಿ ಸಾಗಲು ಎಲ್ಲರೂ ಸ್ವತಂತ್ರರು.

ಸಂ : ನೀವು ಮಡಿಕೇರಿಯ ಪ್ರಥಮ ಪ್ರಜೆಯಾಗಿ ಎಷ್ಟು ವರ್ಷ ಕೆಲಸ ಮಾಡಿದಿರಿ ?

ಉ : ನಾನು 1990 ಜುಲೈನಿಂದ 1995ರ ಜುಲೈನವರೆಗೆ ಅಧಿಕಾರವನ್ನು ಪೂರೈಸಿದೆ. ಸಾಕು, ನಾನು ನನ್ನ ಮನಸ್ಸಿಗೆ ನೆಮ್ಮದಿಯಾಗುವಂತೆ ಕಾರ್ಯ ನಿರ್ವಹಿಸಿದ್ದೇನೆ. ಕಾಂಗ್ರೆಸ್ ಪಕ್ಷದಲ್ಲಿ ಸುಮಾರು 12 ವರ್ಷ ಜನರಲ್ ಸಕ್ರೆಟರಿಯಾಗಿ ಕಾರ್ಯ ನಿರ್ವಹಿಸಿದ್ದೇನೆ. ಈಗಲೂ ಪಕ್ಷದ ಸದಸ್ಯನಾಗಿದ್ದೇನೆ. ಈಗಲೂ ಸಭೆಗಳಿಗೆ ಆಹ್ವಾನ ಬರುತ್ತಿರುತ್ತದೆ.

ಸಂ : ನೀವು ಒಬ್ಬ ಎಂ.ಎಲ್.ಎ. ಯಾಕಾಗಬಾರದು ?

ಉ : ಬೇಡ ಬೇಡ, ನಾನು ಯಾವುದಕ್ಕೂ ಹೋಗಲಾರೆ. ರಾಜಕೀಯದಲ್ಲಿ ಒಳ್ಳೆಯ ಕೆಲಸ ಮಾಡಲು ಸಾಧ್ಯವಿಲ್ಲ. ರಾಜಕೀಯದಲ್ಲಿ ಇಂದು ಸ್ವಾರ್ಥವೇ ತುಂಬಿಹೋಗಿದೆ. ಕೆಲವೊಮ್ಮೆ ಕೆಲವು ಕೆಲಸಗಳನ್ನು ಮಾಡಲೂ ಸಾಧ್ಯವಾಗುವುದಿಲ್ಲ. ಅದೇ ಸಂದರ್ಭದಲ್ಲಿ ನಾವು ಏನಾದರು ವ್ಯಕ್ತಿಗತ ಕಾರ್ಯದಲ್ಲಿ ತೊಡಗಿದರೆ 'ರಾಜಕೀಯದಲ್ಲಿ ಒಳ್ಳೇ ದುಡ್ಡು ಮಾಡಿಬಿಟ್ಟ' ಎನ್ನುತ್ತಾರೆ. ಆದುದರಿಂದ ಈಗ ಕಾರ್ಯ ನಿರ್ವಹಿಸಿದ್ದೇ ಸಾಕು ಎಂದು ಭಾವಿಸಿದ್ದೇನೆ.

ಸಂ : ನೀವು ಗೌಡ ಸಂಘ ಸಂಸ್ಥೆಗಳಲ್ಲಿ ದುಡಿದಿದ್ದೀರಾ ?

ಉ : ಸಕ್ರಿಯವಾಗಿ ಕೆಲಸ ಮಾಡಿದ್ದೇನೆ. ವಿದ್ಯಾ ಸಂಸ್ಥೆಯಲ್ಲಿ 5 ವರ್ಷ, ಗೌಡ ಸಮಾಜದಲ್ಲಿ 6 ವರ್ಷ ಕಾರ್ಯ ನಿರ್ವಹಿಸಿದ್ದೇನೆ. ಈ ಸಮಾಜದ ಸ್ಥಾಪನೆಗೆ ಮುಖ್ಯ ಕಾರಣ ಜೆ. ಸಿ. ಈರಯ್ಯನವರು. ಮೊಟ್ಟ ಮೊದಲು ಅವರು ಸ್ವಾಮೀಜಿಯವರನ್ನು ಇಲ್ಲಿಗೆ ಕರೆಯಿಸಿ ಸಮಾಜ ಸ್ಥಾಪನೆಗೆ ನಾಂದಿ ಹಾಡಿದವರು. ಆದರೆ ಇಂದು ಅವರು ಯಾರ ನೆನಪಿನಲ್ಲೂ ಇಲ್ಲ. ಅವರ ಬಗ್ಗೆ ಬರೆಯಿರಿ.

ಸಂ : ಇಂದಿನ ಗೌಡ ಸಂಸ್ಥೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉ : ಇಲ್ಲಿ ಪರಸ್ಪರರ ನಡುವೆ ಸಾಮರಸ್ಯ ಇಲ್ಲ. ಒಬ್ಬೊಬ್ಬರು ತಾವು ಹೇಳಿದ್ದೇ ನಡೆಯಬೇಕು ಎಂಬಂತೆ ವರ್ತಿಸುತ್ತಾರೆ.

ಹೀಗೆ ಸ್ವಪ್ರತಿಷ್ಠೆಯನ್ನೇ ಕಾಯ್ದು ಕೊಳ್ಳಲು ಸಮಯ ವ್ಯರ್ಥವಾದಾಗ ಜನಾಂಗದ ಅಭಿವೃದ್ಧಿ ಎಲ್ಲ ಸಾಧ್ಯ. ಇದ ರಿಂದ ಮನನೊಂದೇ ನಾನು ಅಲ್ಲಿಂದ ಹೊರ ಬಂದೆ. ಮಹಿಳಾ ಸಂಘಟನೆ, ಯುವ ಸಂಘಟನೆಗಳಂತಹ ಸಂಘಗಳು ಸಮಾಜದಡಿ ಯಲ್ಲಿ ಹುಟ್ಟಿಕೊಂಡು, ಪರಸ್ಪರ ಹೊಂದಿ ಕೊಂಡು ಮುನ್ನಡೆದರೆ ಖಂಡಿತಾ ಏಳಿಗೆ ಸಾಧ್ಯ. ನಮ್ಮ ಸಂಸ್ಥೆಗಳು ಸುಸ್ಥಿತಿಯಲ್ಲಿ ದಿದ್ದರೆ 'ಕೊಡಗು ಉತ್ಸವ'ದಲ್ಲಿ ಅವ ಮಾನ ಎದುರಿಸುವ ಬದಲು ನಮ್ಮ ಸಂಸ್ಕೃತಿ ವಿಜೃಂಭಿಸುತ್ತಿತ್ತು.

ಸಂ : ನಮ್ಮ ಜನಾಂಗದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉ : ಇಂದು ಅತ್ಯಂತ ವೇಗವಾಗಿ ಮುನ್ನಡೆಯುತ್ತಿರುವ ಜನಾಂಗವೇ ನಮ್ಮದು. ಇಂದು ಎಲ್ಲಾ ಕ್ಷೇತ್ರಗಳಲ್ಲೂ, ಅದರಲ್ಲೂ ಯಾರ ಸಹಕಾರವೂ ಇಲ್ಲದೆ, ಜನ ಮುನ್ನಡೆಯುತ್ತಿರುವುದನ್ನು ನೋಡಿ ದರೆ ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ಜನಾಂಗ ಅಭಿವೃದ್ಧಿಯ ಉತ್ತುಂಗಕ್ಕೇರು ವುದರಲ್ಲಿ ಸಂಶಯವಿಲ್ಲ. ಆದರೆ ನಮ್ಮ ಜನಾಂಗದಲ್ಲಿ ಸ್ವಾರ್ಥ ಹೆಚ್ಚಾಗಿದೆ. ಹಣ ವಂತರು ಬಹಳ ಮಂದಿ ಇದ್ದರೂ ಸಮಾಜ ಸೇವೆ ಮಾಡಲಾರರು. ನೀವು ಯಾರ ನ್ನಾದರು ಮಾತನಾಡಿಸಿದರೆ ನನಗೆ ಇಷ್ಟು ಆಸ್ತಿಯಿದೆ, ಅಷ್ಟು ತೋಟವಿದೆ ಎಂದು ಅವರವರ ಬಗ್ಗೆ ಹೊಗಳಿಕೊಳ್ಳುವುದನ್ನೇ ನಾವಿಂದು ಕಾಣಬಹುದು.

ಸಂ : ಯುವ ಜನತೆಯ ಬಗ್ಗೆ ಏನು ಹೇಳುತ್ತೀರಾ ?

ಉ : ನಮ್ಮ ಯುವಕರು ಬಹಳ ಕಷ್ಟ ಪಡುತ್ತಿದ್ದಾರೆ. ದೇವರು ಪ್ರತಿಯೊಬ್ಬ ರಿಗೂ ದಾರಿ ತೋರಿಸುತ್ತಾನೆ. ಆದುದ ರಿಂದಲೇ ಎಲ್ಲರೂ ದೇವರನ್ನು ನಂಬು ತ್ತಾರೆ. ಎಲ್ಲಾ ಜನಾಂಗದವರೂ ದೇವ ರನ್ನು ಪೂಜಿಸುತ್ತಾರೆ. ಇದರಿಂದ ನೈತಿಕ ಪ್ರಜ್ಞೆ ಹೆಚ್ಚುತ್ತೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಸೂಕ್ತ ತರಬೇತಿ ಪಡೆದು ಪ್ರಯತ್ನ ಪಟ್ಟರೆ ಜೀವನದಲ್ಲಿ ಯಶಸ್ಸು ದೊರೆಯುವುದು ಖಂಡಿತ ಸಾಧ್ಯ. ನಾನೂ ಸಹ ಕಷ್ಟದಲ್ಲೇ ಬೆಳೆದು ಬಂದವನು. ನಾವು ಇನ್ನೊಬ್ಬರನ್ನು ಅವಲಂಬಿಸಿ ಬದುಕಬಾರದು. ನಂಬಿದವರೇ ಕೈಕೊಡು ವುದು ಜಾಸ್ತಿ.

ಮೂಡಗದ್ದೆ ತಮ್ಮಯ್ಯನವರ ಪುತ್ರಿ ಮಾತ್ರಾವತಿಯವರನ್ನು ವಿವಾಹವಾಗಿರುವ ಇವರಿಗೆ ಮೂವರು ಪುತ್ರಿಯರಿದ್ದಾರೆ. ಮೊದಲನೆಯವಳು ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸಿದರೆ, ಎರಡನೆಯ ಮಗಳು ಅಧ್ಯಾಪಕಿಯಾಗಿ ಮಡಿಕೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಳೆ, ಕಿರಿಯ ಮಗಳು ಪಿ.ಯು.ಸಿ. ವಿದ್ಯಾಭ್ಯಾಸ ದಲ್ಲಿ ತೊಡಗಿದ್ದಾಳೆ. 54 ವರ್ಷ ವಯಸ್ಸಿನ ವಾಸುದೇವ್‌ರವರಲ್ಲಿ ದುಡಿ ಯುವ ಶಕ್ತಿ ಸಾಮರ್ಥ್ಯ ಮೈದುಂಬಿ ಕೊಂಡಿದೆ. 'ಸಂಗಾತಿ' ಪತ್ರಿಕೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಿರುವ ಇವರು ಜನಾಂಗಕ್ಕೆ, ಪತ್ರಿಕೆಗಳನ್ನು ಓದಿ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಳ್ಳು ವಂತೆ ಸಲಹೆ ನೀಡುತ್ತಾರೆ. ಅಪಾರ ಅನು ಭವ, ಆಕಾಂಕ್ಷೆ ಹೊಂದಿದ್ದರೂ ಕೂಡ ಇಂದಿನ ಸಮಾಜ ಜನತೆಯನ್ನು ನೋಡಿ ಮನ ನೊಂದಿರುವುದು. ಅವರ ವಿಷಾದ ತುಂಬಿದ ಧ್ವನಿಗಳಿಂದ ಸ್ಪಷ್ಟವಾಯಿತು. ಅವರು ಮತ್ತೆ ಜನಾಂಗದ ಹಿತಕ್ಕಾಗಿ ಹೋರಾಡಬೇಕೆಂದು 'ಸಂಗಾತಿ' ಬಯಸು ತ್ತದೆ. ○

ಸಂದರ್ಶನ : **ಪಟ್ಟಡ ಶಿವಕುಮಾರ್**

[2ನೇ ಪುಟದಿಂದ ಮುಂದುವರೆದುದು]

ಪೊಲಿಯೇ ಬಾ ಎಂಬುದಾಗಿ ಜೋರಾಗಿ ಕೂಗುತ್ತಾ ಮನೆಯಿಂದ ಹೊರಡುತ್ತಾರೆ. ಗದ್ದೆಯಲ್ಲಿ ಈ ಸಮಯದಲ್ಲಿ ಭತ್ತ ಕದಿರು ಹೋಗಿರುತ್ತದೆ. ಭತ್ತದ ಗದ್ದೆಯಲ್ಲಿ ಒಂದನ್ನು ಆರಿಸಿ ಮನೆಯ ಯಜಮಾನನು ಮೊದಲು ದೇವರನ್ನು [ಈಶ್ವರ ಇಗ್ಗುತಪ್ಪ ಓ...ಓ...ಓ...ಓಹುಯಿ ಓ ಹು ಯಿ ಓಹುಯಿ ಎಂದು] 3 ಬಾರಿ ಕರೆಯು ತ್ತಾರೆ. ಬೆಳೆಯನ್ನು ಕುಯ್ದು ಕದಿರು ಗುತ್ತಿಯಲ್ಲಿಟ್ಟು ಪೊಲಿ ಪೊಲಿಯೇ ಎಂದು ಎಲ್ಲರೂ ಕೂಗುತ್ತಾರೆ. ಯಜಮಾನನು ಬೆಳೆಯನ್ನು ಕುಯ್ಯುವ ಸಮಯದಲ್ಲಿ ಕೋವಿಯಿಂದ ಗುಂಡನ್ನು ಆಕಾಶಕ್ಕೆ ಹೊಡೆಯುತ್ತಾರೆ. ಪಟಾಕಿ ಮುಂತಾ ದವುಗಳನ್ನು ಹೊಡೆಸಿ ಕದಿರನ್ನು ಮನೆಗೆ ತಂದು ಪೂಜೆಮಾಡಿ ಅದರ ಅಕ್ಕಿಯನ್ನು ಈಗಾಗಲೇ ತಯಾರಿಸಿದ ಪಾಯಸಕ್ಕೆ ಹಾಕಿ ಮನೆಯ ಹಲವು ಸ್ಥಳಗಳಲ್ಲಿ, ಅಟ್ಟಕ್ಕೆ ದನದ ಕೊಟ್ಟಿಗೆಗೆ, ಕಣದ ಗೂಟಕ್ಕೆ ಮುಂತಾದ ಸ್ಥಳಗಳಿಗೆ "ನೆರೆ" ಯನ್ನು ಕೂಡಿಸಿ ಕಟ್ಟುತ್ತಾರೆ. ಹುತ್ತರಿ ಕಳೆದ ಮೂರು, ಐದು, ಏಳು ದಿನಗಳ ವರೆಗೆ ಗ್ರಾಮದಲ್ಲಿ ಕೋಲಾಟ, ಬಯ ಲಾಟ ಮುಂತಾದ ಮನರಂಜನೆಯ ಮೇಳ ಗಳಿರುತ್ತವೆ.

ಹುತ್ತರಿ ಕಳೆದ ಮೂರು, ಐದು, ಏಳು ದಿನಗಳಲ್ಲಿ "ಊರೋಳವು" ಎಂಬ ಕಂಬ ಳದ ಊಟವನ್ನು ಊರಿನವರು ಸೇರಿ ನೆರವೇರಿಸುತ್ತಾರೆ.

○ **ಪರ್ಲಕೋಟಿ ಧನು ಅಪ್ಪಯ್ಯ**
ಬಿಳಿಗೇರಿ ಮಡಿಕೇರಿ

1837ರ ಸ್ವಾತಂತ್ರ್ಯ ಸಂಗ್ರಾಮ

[ಮುಂದುವರೆದ ಭಾಗ]

ಸುಳ್ಯದಿಂದ ಹೊರಡುವಾಗ ಸಾವಿರಕ್ಕಿಂತ ಹೆಚ್ಚಿನ ಜನರು ಸೇರಿದ್ದರು. ಕೊಡಗಿನಿಂದ ಹೊರಟ ತೊರೆಯು ಈಗ ನದಿಯಾಗಿ ಹರಿದಿತ್ತು. ಸೈನ್ಯದ ಮೊದಲನೇ ಕೆಲಸವು ಸುಳ್ಯದ ಬ್ರಿಟೀಷರ ಪರವಾಗಿ ಸುಬೇದಾರರಾಗಿ ತನ್ನ ಅಣ್ಣ ಕೊಡಗಿನ ದಿವಾನರಾಗಿರುವ ಲಕ್ಷ್ಮೀ

ಲೇಖಕ :
ಪೂಜಾರಿ ನೊಣ್ಣಪ್ಪ, ಬೆಂಗಳೂರು

ನಾರಾಯಣರವರ ತಮ್ಮನೆಂಬ ಅಹಂಕಾರದಿಂದ ಸುಳ್ಯದ ಸುತ್ತಮುತ್ತಲಿದ್ದ ಜನರಿಗೆ ಕಿರುಕುಳ ಕೊಡುತ್ತಿದ್ದ ರಾಮಪ್ಪಯ್ಯ ಎಂಬುವರನ್ನು ಕೊಂದು ಅವರ ಬದಲು ಕಲ್ಯಾಣ ಸ್ವಾಮಿಯ ಪರವಾಗಿ ಸುಬೇದಾರರನ್ನಾಗಿ ತಿಮ್ಮಪ್ಪಯ್ಯನವರನ್ನು ನೇಮಿಸಿದರು.

ನಂತರ ಸೈನ್ಯವು ಬೆಳ್ಳಾರೆ ಕಡೆಗೆ ನಡೆದು ಅಲ್ಲಿಯ ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿದ್ದ ಬ್ರಿಟೀಷರ ಪರವಾಗಿ ಪಾರುಪತ್ತೆದಾರರು, ಕರಣಿಕರನ್ನು ಸೆರೆಹಿಡಿದು ಅಲ್ಲಿದ್ದ ಖಜಾನೆಯನ್ನು ತಮ್ಮ ವಶಪಡಿಸಿಕೊಂಡು ಅದರಲ್ಲಿದ್ದ ಹಣವನ್ನು ತೆಗೆದು ಅಣ್ಣೀಗೌಡರ ವಶಕ್ಕೆ ಕೊಟ್ಟರು. ಅಲ್ಲದೆ ಅಲ್ಲಿನ ಕಚೇರಿಯಲ್ಲಿ ಕಲ್ಯಾಣ ಸ್ವಾಮಿ ದರ್ಬಾರನ್ನು ನಡೆಸಿದರು. ಕುಕುನೂರು ಚೆನ್ನಯ್ಯನವರು ಅಲ್ಲಿ ಸೇರಿದ್ದ ಸೈನಿಕರಿಗೆ ಊಟದ ಏರ್ಪಾಡನ್ನು ಮಾಡಿದರು. ಈ ಸಮಯದಲ್ಲಿ ಕಲ್ಯಾಣ ಸ್ವಾಮಿಯು ಕಳುಹಿಸಿದ ನಿರೂಪವನ್ನು ನೋಡಿ ಚೆಂಬು, ಪೆರಾಜೆಯ ರೈತರೂ ಬಂದು ಸೇರಿದರು. ಹೀಗಾಗಿ ಸೈನ್ಯದ ಸಂಖ್ಯೆಯು ಮೂರು ಸಾವಿರಕ್ಕೆ ತಲುಪಿತು. ಬಂದವರು ತಮ್ಮ ಆಯುಧಗಳನ್ನೂ ತಂದಿದ್ದರು. ಬೆಳ್ಳಾರೆಯಲ್ಲಿ ಯುವಕರು ಹುರುಪಿನಿಂದ ಕಲ್ಯಾಣ ಸ್ವಾಮಿಯ ಸೈನ್ಯಕ್ಕೆ ಸೇರಿದರು. ಬೀರಣ್ಣ ಬಂಟರನ್ನು ಬೆಳ್ಳಾರೆಯ ಸುಬೇದಾರರನ್ನು ರಾಮಗೌಡರ ಸಲಹೆಯಂತೆ ಕಲ್ಯಾಣ ಸ್ವಾಮಿಯು ನೇಮಿಸಿದರು. ರಂಗಪ್ಪ ಮತ್ತು ಚಡಕರಾಮನೆಂಬಿಬ್ಬರನ್ನು ಸುಬೇದಾರರನ್ನಾಗಿ ನೇಮಿಸಿ ಅವರೊಡನೆ ಕೆಲವು ಸೈನಿಕರನ್ನು ಸೇರಿಸಿ ಸುಬ್ರಹ್ಮಣ್ಯದ ಕಡೆಗೆ ಕಳುಹಿಸಿದರು.

ನಂತರ ಕಲ್ಯಾಣ ಸ್ವಾಮಿಯ ಸೈನ್ಯವು ಪುತ್ತೂರಿನ ಕಡೆ ನಡೆಯಿತು. ಸೈನ್ಯವು ಪುತ್ತೂರನ್ನು ತಲುಪಿದಾಗ ಅಲ್ಲಿ ಮಂಗಳೂರಿನ ಕಲೆಕ್ಟರ್ ಕಲ್ಯಾಣ ಸ್ವಾಮಿಯ ಸೈನ್ಯವನ್ನು ನೋಡಿ ರಾತ್ರೋ ರಾತ್ರಿ ಮಂಗಳೂರಿಗೆ ಕುದುರೆಯನ್ನು ಹತ್ತಿ ಅಲ್ಲಿನ ಬಂದೋಬಸ್ತಿಗಾಗಿ ಹೋದರು. ಕಲ್ಯಾಣ ಸ್ವಾಮಿಯು ಮಾರನೇ ದಿನ ಅಲ್ಲಿನ ಖಜಾನೆಯನ್ನು ವಶಪಡಿಸಿಕೊಂಡು ಅದರಲ್ಲಿದ್ದ ಹಣವನ್ನು ತೆಗೆದುಕೊಂಡರು. ಅಲ್ಲಿ ಸುಬೇದಾರರಾಗಿದ್ದ ದೇವಯ್ಯ ಎಂಬುವವರನ್ನು ತಮ್ಮ ಕಡೆಯ ಸುಬೇದಾರರಾಗಿರಬೇಕೆಂದೂ ಕೇಳಿಕೊಂಡಾಗ ಅವರು ಅದಕ್ಕೆ ಒಪ್ಪದಿದ್ದಾಗ ಅವರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟು ಕಲ್ಯಾಣ ಸ್ವಾಮಿಯು ದರ್ಬಾರನ್ನು ಮಾಡಿಸಿದರು. ಅಲ್ಲದೆ ಪುತ್ತೂರಿನ ಮುಖ್ಯಸ್ಥರು ಹಾಗೂ ವ್ಯಾಪಾರಿಗಳು ಕಲ್ಯಾಣ ಸ್ವಾಮಿಯ ಸೈನ್ಯಕ್ಕೆ ಬೇಕಾದ ಊಟ ಉಪಚಾರವನ್ನು ಏರ್ಪಾಡು ಮಾಡಿದರು. ಅಲ್ಲಿನ ಯುವಕರು ಹುರುಪಿನಿಂದ ಸ್ವಾತಂತ್ರ್ಯ ಸಂಗ್ರಾಮದ ಸೈನ್ಯಕ್ಕೆ ಸೇರಿದರು. ಸೈನ್ಯವು ಎರಡು ದಿನ ಪುತ್ತೂರಿನಲ್ಲಿದ್ದು ಮೂರನೇ ದಿನ ಅಲ್ಲಿಂದ ಮುಂದಕ್ಕೆ ಹೊರಟಿತು.

ನಂತರ ಸೈನ್ಯವು ನಂದಾವರ ತಲುಪಿತು. ಅಲ್ಲಿನ ಬಂಗರಾಜರು ಕಲ್ಯಾಣ ಸ್ವಾಮಿಯ ಸೈನ್ಯಕ್ಕೆ ಬೆಂಬಲ ಸೂಚಿಸಿ ಸೈನ್ಯದೊಡನೆ ಬರುವುದಾಗಿ ಹೊರಟರು. ಈ ಸುದ್ದಿಯನ್ನು ಕೇಳಿ ತೆಂಕು ಕುಂಬಳೆಯ ಸುಬ್ರಾಯ ಹೆಗ್ಗಡೆಯವರು ಸುಮಾರು ಮುನ್ನೂರು ಜನ ಸೈನಿಕರೊಡನೆ ಹೊರಟರು. ಅವರು ಬರುವಾಗ ದಾರಿಯಲ್ಲಿ ಮಂಜೇಶ್ವರ, ಉಳ್ಳಾಳಗಳಲ್ಲಿ ಜನರು ಸುಬ್ರಾಯ ಹೆಗ್ಗಡೆಯವರ ಸೈನ್ಯಕ್ಕೆ ಊಟ ಉಪಚಾರವನ್ನು ಮಾಡಿಸಿ, ಉಡುಗೊರೆ ಕೊಟ್ಟು ಕಳುಹಿಸಿದರು. ಆದರೆ ಇವರು ಮಂಗಳೂರನ್ನು ಸೇರುವ ಮೊದಲು ನೇತ್ರಾವತಿಯನ್ನು ದಾಟುವಾಗ ಸೈನಿಕರಿದ್ದ ದೋಣಿಗೆ ಬ್ರಿಟೀಷರು ಗುಂಡು ಹೊಡೆದು ಸೈನಿಕರೆಲ್ಲಾ ನದಿಯಲ್ಲಿ ಮುಳುಗಿ ಸತ್ತರು.

ಕಲ್ಯಾಣ ಸ್ವಾಮಿಯ ಸೈನ್ಯವು ನಂದಾವರದಿಂದ ವಿಟ್ಲದ ಕಡೆ ಸಾಗಿತು. ಅಲ್ಲಿಯೂ ಜನರು ತಾವು ತಾವಾಗಿಯೇ ಆಯುಧದೊಡನೆ ಸೈನ್ಯವನ್ನು ಸೇರಿಕೊಂಡರು. ನಂತರ ಸೈನ್ಯವು ಪಾಣೆಮಂಗಳೂರನ್ನು ಹಾದು ನೇತ್ರಾವತಿ ನದಿಯನ್ನು ದಾಟಿ ಮಂಗಳೂರನ್ನು ಸೇರಿತು. ಈ ಸಮಯದಲ್ಲಿ ಬ್ರಿಟೀಷ್ ಅಧಿಕಾರಿಗಳು ತಲಚೇರಿಗೆ ಹೋಗಲು ಹಡಗನ್ನು ಕಾಯುತ್ತಿದ್ದರು. ಸೈನ್ಯವು ಮಂಗಳೂರನ್ನು ತಲುಪಿದಾಗ ರಾತ್ರೆಯಾದ್ದರಿಂದ ಆ ರಾತ್ರಿ ವಿಶ್ರಮಿಸಿ ಮಾರನೇದಿನ ಮಂಗಳೂರಿನ ಖಜಾನೆಯನ್ನು ವಶಪಡಿಸಿಕೊಂಡು ಅದರಲ್ಲಿದ್ದ ಹಣವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸೆರೆಮನೆಗೆ ಹೋಗಿ ಅಲ್ಲಿದ್ದ ಕೈದಿಗಳನ್ನು ಬಿಡಿಸಿ, ತಮ್ಮ ಸೈನ್ಯಕ್ಕೆ ಸೇರಿಸಿಕೊಂಡರು.

[ಮುಂದುವರಿಯುವುದು]

ಡ್ರೆಸ್ ಅಲ್ಲವಿದು ಲೆಸ್

ಡ್ರೆಸ್ ! ಡ್ರೆಸ್ !! ಡ್ರೆಸ್ !!! ವಾಟ್ ಈಸ್ ದಿಸ್ ? ಡ್ರೆಸ್ ಅಲ್ಲವಿದು ಲೆಸ್. ಹುಚ್ಚು ಬರಿಯ ಹುಚ್ಚು. ಅಂಗಾಂಗ ಪ್ರದರ್ಶನ ಆಧುನಿಕತೆಯ ವೈಶಿಷ್ಟ್ಯ! ? ಮೊಣಕಾಲಿನವರೆಗೆ ಬಟ್ಟೆ ತೊಡುವುದು ಆಧುನಿಕರ ಆದರ್ಶ ! ?

ಸಂಪ್ರದಾಯ ಉಡುಗೆಯವರಿಗೆ ಗೌರವ ಮಾನ್ಯತೆಗಳು ಬಲು ಕಡಿಮೆ. ಸಿನೆಮಾಗಳು ತೆರೆಕಂಡಂತೆ ದಿನಕ್ಕೊಂದರಂತೆ ಏತಾಪೋತ ಉಡುಗೆಗಳು. ಡಿ.ಡಿ.ಎಲ್.ಜೆ.ಯ ಫ್ರಾಕ್, ಲಾಚಾಲಂಗ, ಪ್ಯಾರ್ಲದ ಗಜಕಾಲಗಲದ ಪ್ಯಾಂಟು ಇತ್ಯಾದಿ. ಇಂದಿನ ಯುವತಿಯರಿಗೆ ಬ್ಲೌಸ್ ಹೊಲಿಸಲು ಕೇವಲ 40 ಸೆಂ.ಮೀ. ಬಟ್ಟೆ ಸಾಕೇನೋ. ಉಳಿದ 35 ರಿಂದ 40 ಸೆಂ.ಮೀ. ಬಟ್ಟೆ ಭಾರತೀಯ ಸಂಸ್ಕೃತಿಗೆ ಮಾಡುತ್ತಿರುವ ಅವಮಾನಕರ ಉಳಿತಾಯ. ಯುವ ಪೀಳಿಗೆಯೇನು ಬಂತು. ಇಂದಿನ ವಯಸ್ಕರು ಕೂಡ ಯುವಜನತೆಗೆ ಸವಾಲಾಗುವಷ್ಟು ಫ್ಯಾಶನ್ ಪ್ರಿಯರು.

ನಾಪಂಡ ಗೀತಾಶ್ರೀ, ಮಡಿಕೇರಿ.

ಬಡವನೊಬ್ಬ ತುಂಡುಡುಗೆ ತೊಟ್ಟರೆ ಅದು ಆತನ ಬಡತನದ ಪ್ರತೀಕ, ಆತನ ಬಗ್ಗೆ ವ್ಯಂಗದಿಂದ ನೋಡುವ ಮುಖಗಳು ಹಲವಾರು. ಅದೇ ಶ್ರೀಮಂತ ಟೂಪೀಸ್ ಬಟ್ಟೆ ತೊಟ್ಟರೆ ಅದು ಶೋಕಿ ! ಹೊಸ ಫ್ಯಾಶನ್ ! ಶ್ರೀಮಂತಿಕೆಯ ದ್ಯೋತಕ!. "ತುಂಡು ಬಟ್ಟೆ ಸಾಕು ನನ್ನ ಮಾನ ಮುಚ್ಚೋಕೆ..." ಎಂಬ ಬಡವರ್ಗದವರಿಗೆ ಬಲಿಷ್ಟ ಕೈಗಳ ಕಾಟ ತಪ್ಪಿದ್ದಲ್ಲ. ಯಾಕೀ ರೀತಿ ? ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾದರೂ ಇದೆಯೇ ಇಲ್ಲಿ ಸಮಾನತೆ ?

ಉಡುಗೆಯುಪಯೋಗ ಪೂರ್ವಕಾಲದಿಂದಲೂ ಮಾನವನ ಮಾನ ಮುಚ್ಚುವುದರೊಂದಿಗೆ ಆರಂಭವಾಗಿ, ಸೌಂದರ್ಯ ಮನೋಭಾವದಿಂದಿಂದು ಸ್ಪರ್ಧಾಲೋಕಕ್ಕಿಳಿದಿರುವುದು ನಿಜವಾಗಿಯು ವಿಚಿತ್ರ ಹಾಗೂ ಖೇದಕರ.

ಯಾವುದೇ ಸಮಾರಂಭವಿರಲಿ, ಮದುವೆ, ನಾಮಕರಣ, ಎಂಗೇಜ್‌ಮೆಂಟ್, ಕಾಲೇಜ್‌ಡೇ...ಇತ್ಯಾದಿ ಯಾ ವು ದೇ ಇದ್ದರೂ ಹೊಸಬಟ್ಟೆ ಬೇಕೆನ್ನುವ, ಅದೂ ತನಗಿಷ್ಟವಾದುದಲ್ಲ ತನಗೆ ಸರಿ ಹೊಂದುವಂತದ್ದಲ್ಲ, ಬದಲಾಗಿ ಇನ್ನೊಬ್ಬರು ತೊಟ್ಟಿರುವಂತದ್ದು. ಅವರ ಉಡುಪನ್ನು ಮೀರಿಸುವಂತದ್ದೇ ಬೇಕೆನ್ನುವ ಯುವ ಜನಾಂಗದ ಹುಚ್ಚು ಮನೋಭಾವನೆಯ ಅರ್ಥವಾದರೂ ಏನು ? ಇದಕ್ಕೆ ಉತ್ತರ ಹುಡುಕುತ್ತಾ ಹೊರಟರೆ ಕಾಲ ವ್ಯರ್ಥವಾಗಬಹುದೇ ಹೊರತು ಸರಿಯಾದರ್ಥ ಸಿಗಲಾರದೇನೋ ?

ಜಾಹೀರಾತುಗಳು ಇಂದಿನ ಫ್ಯಾಶನ್‌ನ ಮೂಲಗಳಾಗಿವೆ. ಇದು ಯುವ ಜನತೆಯ ಮೈ–ಮನಗಳನ್ನು ತಳಮಳಗೊಳಿಸುತ್ತವೆ. ಯುವತಿಯರು ಮಾತ್ರವಲ್ಲ ಯುವಕರು ಕೂಡ ಇಂದು ಫ್ಯಾಶನ್ ಪ್ರಿಯರಾಗಿದ್ದಾರೆ, ಶೋಕಿಯಾಗಿದ್ದಾರೆ. ಪಂಚೆ ಪೈಜಾಮುಗಳ ಆ ಕಾಲ ಹೋಯಿತು ಬಿಡಿ. ನಂತರದ ಪ್ಯಾಂಟುಗಳು ನೀಟಾದ ಉಡುಪು. ಅದು ಬಿಟ್ಟು ಈಗ ಧರಿಸುತ್ತಾರೆ ಬರ್ಮುಡಾ. ಹೊಲ–ಗದ್ದೆಗಳಲ್ಲಿ ಕೆಲಸ ಮಾಡಲುಡುವ ಇಂತಹ ಬಟ್ಟೆ ಧರಿಸಿ ಪೇಟೆ ಸುತ್ತುವ ಹುಡುಗರು–ಕೂಲಿಗಳು, ರೈತರು ಅಂತಹ ಬಟ್ಟೆ ಹಾಕಿದರೆ ನೋಡಿ ನಗುತ್ತಾರೆ. ಆದರೆ ಇವರಿಗೂ ಅವರಿಗೂ ವ್ಯತ್ಯಾಸವೇನೂ ಇಲ್ಲ. ಅವರು ಹಾಕುವುದು ಕಪ್ಪು ಯಾ ಖಾಕಿ ಚಡ್ಡಿ ಇವರದು ಕಲರ್‌ಚಡ್ಡಿ ಇಷ್ಟೇ ವ್ಯತ್ಯಾಸ.

ಯಾರು ಏನನ್ನೇ ತೊಡಲಿ ಇಲ್ಲ ಬಿಡಲಿ, ನಗ್ನರಾಗಿಯೇ ಸುತ್ತಾಡಲಿ, ಯಾರಿಗೇನೂ ನಷ್ಟ ಇಲ್ಲ. ಆದರೆ ಸುಸಂಸ್ಕೃತವಾಗಿದ್ದು ವಿಶ್ವ ಮನ್ನಣೆಗೊಳಿಸಿರುವ ಭಾರತೀಯ ಸಂಸ್ಕೃತಿಗೆ ಧಕ್ಕೆ ತರುವ ಕುತಂತ್ರ ಕೆಲಸ ಮಾಡಬೇಡಿರಿ. ಇಂದಿನವರನ್ನು ನೋಡಿದರೆ, ಪ್ರಳಯವಾಗುವವರೆಗೆ ಎಲ್ಲ ರೀತಿಯ, ಎಲ್ಲಾ ಬಗೆಯ ಡ್ರೆಸ್‌ಗಳನ್ನು ಫ್ಯಾಶನ್ ಮಾಡಿ ಮುಗಿಸಬೇಕೆಂದು ಪಣ ತೊಟ್ಟಂತೆ ಕಾಣುತ್ತದೆ.

ನಿತ್ಯ ಚಿಂತನ

○ ಬೇರೆಯವರನ್ನು ಸಂತೋಷಪಡಿಸುವುದು ಒಂದು ಮಹತ್ತರವಾದ ಕಾರ್ಯ.

○ ಮುಗುಳ್ನಗೆಯುಳ್ಳವನು ಎಂತಹ ಕಷ್ಟದ ಪರಿಸ್ಥಿತಿಯನ್ನಾದರೂ ಗೆಲ್ಲುತ್ತಾನೆ.

○ ದೀಪವು ಬತ್ತಿಯಿಲ್ಲದೆ ಪ್ರಕಾಶಿಸುವುದಿಲ್ಲ, ಹಾಗೆ ಜೀವನದಲ್ಲಿ ಭಗವಂತನಿಲ್ಲದೆ ಪ್ರಕಾಶವಿಲ್ಲ.

○ ನಮ್ರತೆಯುಳ್ಳವನು ದೊಡ್ಡವನಾಗಬಲ್ಲ.

○ ವಕ್ರ ಬುದ್ಧಿವುಳ್ಳವನು ನಿಜವಾದ ಮನಶಾಂತಿ ಅನುಭವಿಸಲಾರ.

○ ಸಂಗ್ರಹ : **ನಾಟೋಳನ ದೇವಮ್ಮ ಮೊಣ್ಣಪ್ಪ,** ಮಡಿಕೇರಿ.

ಗೌಡರ ವಿವಾಹ ಪದ್ಧತಿ

[ಹಿಂದಿನ ಸಂಚಿಕೆಯಿಂದ]

ಆರತಿ ಮಾಡುವುದು

ಧಾರಾ ಕಾರ್ಯಕ್ಕೆ ಕೆಲವೇ ಸಮಯಕ್ಕೆ ಮೊದಲು ವರನ ದಿಬ್ಬಣವನ್ನು ಚಪ್ಪರದ ಮುಂಭಾಗಕ್ಕೆ ಬರಮಾಡಿಸಿ ಮುತ್ತೈದೆಯರಿಂದ ಆರತಿ ಮಾಡಿಸುವುದು. ಆಗ ಚಿಕ್ಕ ಹೆಣ್ಣುಮಕ್ಕಳಿಂದ ಮದುವಣ್ಣನ ಕಾಲು ತೊಳೆಸಬೇಕು. ಕಾಲು ತೊಳೆಯುವ ಆ ಚೆಂಬಿಗೆ ಎಲೆ ಅಡಿಕೆ ಮತ್ತು ಹಣ ಹಾಕಿ ಕಳುಹಿಸಬೇಕು. ಆರತಿಯು 5–7-9ರ ಸಂಖ್ಯೆಯಲ್ಲಿ ಆಗಬೇಕು. ಆರತಿ ಮಾಡಿದ ತಟ್ಟೆಗೆ ಅಡೋಳಿಯು ಎಲೆ ಅಡಿಕೆ ಹಾಕಿ ಕಳುಹಿಸಬೇಕು. ಇಲ್ಲಿ ಒಂದು ದೃಷ್ಟಿಕಾಯಿ ಒಡೆದು, ಚಪ್ಪರದ ಮೇಲ್ಕಟ್ಟಡಿಗೆ ವರನ ಬಲಭಾಗದಲ್ಲಿ ಕಂಚುಮಿಯು ಬರುವುದು. ವರನ ಹಸ್ತ ತಾಳಿಸರ ಇರಬೇಕು. ಮೇಲ್ಕಟ್ಕನಡಿಯಲ್ಲಿ ಮಡಿವಾಳನು ನೆಲಕ್ಕೆ ಮಡಿ ಹಾಸಿರಬೇಕು.

ಧಾರೆ ಕಾರ್ಯಕ್ರಮ

ಮೇಲ್ಕಟ್ಟನಡಿಯಲ್ಲಿ ಮದುವಣ್ಣನ ಎದುರಿನಲ್ಲಿ ಒಂದು ಬಿಳಿ ಬಟ್ಟೆ ತೆರೆ ಹಿಡಿದಿರಬೇಕು. ವಧುವಿನ ಸೋದರ ಮಾವನು ನೆಲ್ಲಕ್ಕಿ ಅಡಿಯಲ್ಲಿ ವಧುವಿಗೆ ಸೆರಗಿನ ಹಣ ಕಟ್ಟಿ ವಧುವನ್ನು ಎತ್ತಿ ತಂದು ಮೇಲ್ಕಟ್ಟನಡಿಯಲ್ಲಿ ನಿಲ್ಲಿಸುವರು. ವಧುವನ್ನು ಸೋದರಮಾವ ಎತ್ತಿ ತರುವುದು. ದಿಬ್ಬಣದ ಕಡೆಯುವರಿಗೆ ಸೋದರದವರ ಕಡೆಯಿಂದ, ಆ ವಧುವನ್ನು ಕೊಡುವುದಕ್ಕೆ ಯಾವುದೇ ತರಹದಲ್ಲಿ ಅಸಮಾಧಾನವಿಲ್ಲ ಎಂದು ಖಾತರಿ ಪಡಿಸುವುದಕ್ಕಾಗಿ ವೀಳ್ಯ ಶಾಸ್ತ್ರಕ್ಕೆ ಮೊದಲೇ ವಧುವಿನ ಕಡೆಯಿಂದ ಸೋದರ ಮಾತನಾಡಿಸಿ ಅವರಿಂದ ಆಕ್ಷೇಪಣೆ ಇಲ್ಲವೆಂಬುದನ್ನು ಸರ್ವರ ಎದುರಿನಲ್ಲಿ ದೃಢಪಡಿಸುವುದೇ ಈ ಕ್ರಮ ಎಂದು ತಿಳಿದಿದೆ). ಒಂದು ಚೊಂಬು ನೀರು ತೆಗೆದುಕೊಂಡು ಸರ್ವರಿಗೂ ಧಾರಾ ಕಾರ್ಯಕ್ಕೆ ನೀರು ಎಂದು ಎಲ್ಲರಲ್ಲೂ ಮುಟ್ಟಿಸಿ ತರುವುದು. ವಧುವಿನ ತಂದೆ ಒಂದು ಕಂಚಿನ ಚೆಂಬನ್ನು ಹಿಡಿದು ವಧುವರರ ಮಧ್ಯೆ ನಿಂತಿರಬೇಕು. ಈಗ ಉಭಯಸ್ಥ ಮುತ್ತೈದೆಯರು ಬಂದು ಕಂಚಿಮಿಗೆ ಅಕ್ಕಿ ಹಾಕಿ ನಮಸ್ಕರಿಸಬೇಕು. ನಂತರ ಕಂಚಿಮಿಯಲ್ಲಿದ್ದ ತೆಂಗಿನಕಾಯಿ ತೆಗೆದು ಹಾಲು ಬದಲಾಯಿಸಿ ಕಾಯಿಯನ್ನು ದೀಪವನ್ನು, ಹಿಂಗಾರವನ್ನು ಎಲೆ, ಅಡಿಕೆ, ಕುಂಕುಮ ಕರಡಿಗೆ, ವಿಭೂತಿ, ಎಲ್ಲವನ್ನು ಅದಲು ಬದಲು ಮಾಡಿ ಎರಡು ಕಂಚಿನ ಗಿಂಡಿಯಿಂದಲೂ ವಧುವಿನ ತಂದೆ ಹಿಡಿದಿರತಕ್ಕ ಕಂಚಿನ ಚೆಂಬಿಗೆ ಹಾಲನ್ನು ಹುಯಿದು ನಂತರ ವಧುವರರ ಕೈಯಲ್ಲಿ 5 ಎಲೆ ಒಂದು ಅಡಿಕೆಯನ್ನು ಕೊಟ್ಟು ಇಬ್ಬರ ಕೈಗಳನ್ನು ಜೋಡಿಸಿ [ಕಂಚಿಗೆ ಅಕ್ಕಿ ಹಾಕಿದ ನಂತರ ತೆರೆ ತಗ್ಗಿಸುವುದು] ವರನ ಕೈಯು ಮೇಲೆ ವಧುವಿನ ಕೈಗಳನ್ನಿರಿಸಿ ಹತ್ತು ಕುಟುಂಬ ಹದಿನೆಂಟು ಗೋತ್ರದ ಒಕ್ಕಣೆ ಮಾತನ್ನು ಮೂರು ಬಾರಿ ಹೇಳಿ ವಧುವಿನ ತಂದೆ ತಾಯಿ ಮೂರು ಬಾರಿ ಚೆಂಬಿನಲ್ಲಿದ್ದ ಹಾಲನ್ನು ಕೈಗಳಿಗೆ ಧಾರೆ ಎರೆಯಬೇಕು. [ಈ ಸಮಯದಲ್ಲಿ ಓಲಗವನ್ನು ನಿಲ್ಲಿಸಿ ಧಾರೆಯ ನಂತರ ವಾದ್ಯ ಮಾಡುವುದು.] ಮೂರನೆಯ ಸಲ ಧಾರೆ ಎರೆದಾಗ ಎಲೆ ಅಡಿಕೆಯ ಸಮೇತ ಇಬ್ಬರೂ ಕೆಳಗೆ ಹಿಡಿದಿರತಕ್ಕ ಬಟ್ಟಲಿಗೆ ಎಲೆ ಅಡಿಕೆಯನ್ನು ಬಿಡುವುದು. ಬಟ್ಟಲಿನಲ್ಲಿದ್ದ ಈ ಹಾಲನ್ನು ತೆಂಗಿನಮರ ಅಥವಾ ಹಾಲು ಬರುವ ವೃಕ್ಷದ ಬುಡಕ್ಕೆ ಚೆಲ್ಲಬೇಕು.

ಮಾಂಗಲ್ಯ ಕಟ್ಟುವುದು

ಅನಂತರ ಪ್ರಥಮವಾಗಿ ವರನ ಕೊರಳಿಗೆ ಹಿಂಗಾರದಿಂದ ಕಟ್ಟಿದ ಹೂಮಾಲೆಯನ್ನು ಹಾಕುವುದು. ವರನು ಸಹ ವಧುವಿನ ಕೊರಳಿಗೆ ಹಿಂಗಾರದ ಹೂಮಾಲೆಯನ್ನು ಹಾಕುವುದು ಮತ್ತು ಬೇರೆಯೇ ಆದ ಎರಡು ಪುಷ್ಪ ಮಾಲೆಯನ್ನು ವಧುವು ವರನ ಕೊರಳಿಗೂ, ವರನು ವಧುವಿನ ಕೊರಳಿಗೂ ಹಾಕುವುದು. ನಂತರ ಪದ್ಧತಿ ಪ್ರಕಾರ "ಹತ್ತು ಕುಟುಂಬ ಹದಿನೆಂಟು ಗೋತ್ರ ಕುಲಸ್ಥರ ಸಭೆಯಲ್ಲಿ ಸಮಸ್ತರ ಸಂಗಡ ಕೇಳಿ... ಗೋತ್ರದ ......ಎಂಬ ವರನು......ಗೋತ್ರದ... ಎಂಬ ವಧುವಿಗೆ ಸೀತಾವಳಿ ಚಪ್ಪರದ ಮೇಲ್ಕಟ್ಟನಡಿಯಲ್ಲಿ ಮಾಂಗಲ್ಯ ಕಟ್ಟುವಂತೇವೆ"–ಎಂದು ಮೂರು ಬಾರಿ ಹೇಳಿ ಶುಭ ಗಳಿಗೆಯಲ್ಲಿ ವರನು ವಧುವಿಗೆ ತಾಳಿ ಕಟ್ಟುವುದಾಗಿದೆ. ಈ ಸಮಯದಲ್ಲಿ ಕೊಂಬು ಕಹಳೆ ಓಲಗದ ಸದ್ದು ಮೊಳಗುವುದು.

ವಧುವಿನ ಮನೆ ಪ್ರವೇಶ

ಧಾರಾ ಕಾರ್ಯ ಮುಗಿದು ವಧುವಿಗೆ ತಾಳಿ ಕಟ್ಟಿದ ನಂತರ ವಧುವು ತನ್ನ ಬಲಗೈಯಲ್ಲಿ ವರನ ಎಡಗೈಯನ್ನು ಹಿಡಿದು ತಾಯಿ ತಂದೆಯರೊಂದಿಗೆ ಬಲಕಾಲು ಮುಂದಿಟ್ಟು ಮನೆ ಹತ್ತುವುದು. ಊರು ಗೌಡರು/ಮುಖ್ಯಸ್ಥರು ಪದ್ಧತಿಯಂತೆ ಹತ್ತು ಕುಟುಂಬ ಹದಿನೆಟು ಗೋತ್ರದ ಒಕ್ಕಣೆ ಹೇಳಿ ಹಸೆ ಚಾಪೆಯಲ್ಲಿ ಕೂರಿಸುವುದು. ಅಲ್ಲಿಗೆ ವಧುವಿನ ತಾಯಿ ಮದುಮಕ್ಕಳಿಗೆ ಹಾಲು ತುಪ್ಪ ಕೊಡುವರು. ನಂತರ ವಧುವರರು ಎಲ್ಲಾ ಹಿರಿಯರು ಬಂಧು ಬಳಗದ ಆಶೀರ್ವಾದ ಬೇಡುವುದು ಪದ್ಧತಿ. ಮದುಮಕ್ಕಳು ಹಿರಿಯರ ಪಾದ ಮುಟ್ಟಿ ನಮಸ್ಕರಿಸಬೇಕು.

[ಮುಂದುವರಯುವುದು]

ಕೃಪೆ :
ಗೌಡ ಸಂಸ್ಕೃತಿ ಕುಟುಂಬ ಕೈಪಿಡಿ

ಶಿರಾಡಿ ಭೂತ

ಐಗೂರು ಸಾಮ್ರಾಜ್ಯದಲ್ಲಿ ಕೆಂಚಮ್ಮನ ಹೊಸಕೋಟೆ ಸುಪ್ರಸಿದ್ಧ ಕ್ಷೇತ್ರವಾಗಿತ್ತು. ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡರ ಮೂಲ ಸ್ಥಾನ ಐಗೂರು [ಹಾಸನ ಜಿಲ್ಲೆ] ಎನ್ನುವುದು ಸಿದ್ಧವೇಷದ ಹಾಡಿನಲ್ಲಿಯೂ ವ್ಯಕ್ತವಾಗುತ್ತದೆ. ಒಂದು ಕಾಲದಲ್ಲಿ ಪಶ್ಚಿಮ ಘಟ್ಟವನ್ನು ದಾಟಿ ಬಂದ ಒಕ್ಕಲಿಗರು ಜೈನ, ಬಂಟ, ಬಿಲ್ಲವ, ಮೊಗವೀರ ಇತ್ಯಾದಿ ಜಾತಿಗಳಾಗಿ ಇಲ್ಲಿನ ಅಳಿಯ ಕಟ್ಟು ಅಥವಾ ಸ್ತ್ರೀ ಮೂಲದ ಕಟ್ಟು ಆಚರಿಸುತ್ತಾ ತುಳುನಾಡಿನ ಮೂಲ ನಿವಾಸಿಗಳೊಂದಿಗೆ ಬೆರೆತುಕೊಂಡರು. ನಂತರ ಇನ್ನೊಂದು ಕಾಲ ಘಟ್ಟದಲ್ಲಿ ಬಂದಂತಹ ಕುಟುಂಬಗಳೇ ಈಗ ಕೊಡಗು, ದಕ್ಷಿಣ ಕನ್ನಡ [ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ ತಾಲ್ಲೂಕು] ಗಳಲ್ಲಿ ಮತ್ತು ಕಾಸರಗೋಡು [ಕೇರಳ] ಜಿಲ್ಲೆಯಲ್ಲಿ ನೆಲೆಸಿರುವವರು.

ತಮ್ಮ ಆರಾಧ್ಯ ದೇವತೆ ಕೆಂಚಮ್ಮಳನ್ನು ಇವರೊಂದಿಗೆ ತರಲು ಪ್ರಯತ್ನಿಸಿದಾಗ ಇಲ್ಲಿಯ ಜನ "ನಮ್ಮ ದೈವದ ಹೊರತು ಬೇರೊಂದು ದೇವರಿಗೆ ಕೈಮುಗಿಯುವುದಿಲ್ಲ, ಕಾಣಿಕೆ ಕೊಡುವುದಿಲ್ಲ" ಎಂದು ವಿರೋಧಿಸುತ್ತಾರೆ. ಕರ್ಂಬೇರ್ [ಕದಂಬರು] ಕೋಟೆಕಟ್ಟಿ ಸಿಡಿಮದ್ದು ಇಡುತ್ತಾರೆ. ಆಗ ಹೊಸಕೋಟೆ ಕೆಂಚಮ್ಮ ನಾಲ್ಕು ಮಂದಿ ಮಾರಿ ದೇವತೆಗಳಲ್ಲಿ ತಾನೊಬ್ಬಳೆಂದು ಹೇಳಿಕೊಳ್ಳುತ್ತಾ ಶಿರಾಡಿ ಭೂತದ ರೂಪದಲ್ಲಿ ಆರಾಧಿಸಲ್ಪಡುತ್ತಾಳೆ. "ಘಟ್ಟದ ಮೇಲೆ ದೇವರು, ಘಟ್ಟದ ಕೆಳಗೆ ದೈವ [ಭೂತ]" ಎಂದು ಪಾಡ್ದನದಲ್ಲಿದೆ.

ಗರುಡ ಕೇಂಜವ ಮತ್ತು ಭಗವತಿ ಮಕ್ಕಳಿಲ್ಲದ ಕಾರಣ ಸೂರ್ಯ ನಾರಾಯಣ ದೇವರಲ್ಲಿ ವರ ಕೇಳಲು ಹೋಗುತ್ತಾರೆ. ಇವರಿಗೆ ಸಿಕ್ಕಿದ ವರದ ಫಲವಾದ ಚಿನ್ನದ ಮೊಟ್ಟೆ ಕಳ್ಳರ ವಶವಾಗಿ ಕರಡಿಗೆಯೊಳಗೆ ಬಂಧಿಸಲ್ಪಟ್ಟು ನೆಲದಡಿಯಲ್ಲಿ ಹೂತುಹೋಗಿರುತ್ತದೆ. ಐಗೂರು ಪ್ರದೇಶದಿಂದ ವಿಸ್ತರಿಸುತ್ತಾ, ಸಮತಟ್ಟು ಪ್ರದೇಶಗಳಲ್ಲಿ ಗದ್ದೆ ಕಡಿಸುತ್ತಿದ್ದ ರೈತನೊಬ್ಬನಿಗೆ ಈ ಕರಡಿಗೆ ಸಿಗುತ್ತದೆ. ಅದರೊಳಗೆ ಅಮೂಲ್ಯವಾದ ಆಭರಣಗಳಿರಬಹುದೆಂದು ಮುಚ್ಚಳ ತೆರೆಯಲು ಪ್ರಯತ್ನಿಸಿದಾಗ, ಕತ್ತಿ, ಹಾರೆ, ಪಿಕ್ಕಾಸುಗಳೇ ಮುರಿದುಹೋಗುತ್ತವೆ. ಅದನ್ನು ಮಂತ್ರ ಪ್ರಭಾವದಿಂದ ಬಂಧಿಸಿರಬಹುದೆಂದು—ಬಂಡಾಜೆಯ ಭಾನು ಸೀನಪ್ಪನೆಂಬಾತನನ್ನು ಕರೆತರುತ್ತಾರೆ. ಆತನು ಕರಡಿಗೆ ಮುಚ್ಚಳ ತೆಗೆದಾಗ ಭೂತ ಕೆಂದಪಾತೆಯು ರೂಪವನ್ನು ತಾಳಿ ಮೇಲ್ಲೋಕಕ್ಕೆ ಪ್ರಯಾಣ ಬೆಳೆಸುತ್ತದೆ. ಅಲ್ಲಿ ತನ್ನ ಜನನಕ್ಕೆ ಕಾರಣವಾದ ನಾರಾಯಣ ದೇವರಲ್ಲಿ ಹೋಗಿ—ಅಲ್ಲಿರುವ ಕುರಿ, ಕೋಳಿ, ಹಂದಿಗಳನ್ನೆಲ್ಲಾ ತಿಂದು ಮುಗಿಸುತ್ತದೆ. ದೇವರಲ್ಲಿ ಭೂತವನ್ನು ಹಿಂಗಿಸಲು ಏನೂ ಉಳಿದಿಲ್ಲವೆಂದು ಹೇಳಿದಾಗ—ನಾರಾಯಣದೇವರ ಪಟ್ಟದ ಕುದುರೆ ಪಟ್ಟದ ಆನೆಯನ್ನು ಕೇಳುತ್ತದೆ. ಅದನ್ನು ಕೊಡಬೇಕಾದರೆ—ಕರಿನಾಡಿನ ಕರಿ ಕಾಗೆಯ ಬಿಳಿಗರಿ, ಬಿಳಿನಾಡಿನ ಬಿಳಿ ಕೊಕ್ಕರೆಯ ಕರಿಗರಿ, ಆಕಾಶಕ್ಕೆ ಏರುವ ಏಣಿ, ಸಮುದ್ರ ಅಳೆಯುವ ಸೇರು, ಒನಕೆ ನಾರು ಮುಂತಾದ ಅಸಾಧ್ಯಗಳನ್ನು ಕೊಡಬೇಕೆಂದು ಭೂತವನ್ನು ಕೇಳಿದಾಗ ಬಾಳೆ ಪಾಲ, ನೂಲುಕೈಂತಾಗು ಮೂಲಕ ಭೂಲೋಕಕ್ಕೆ ಹಿಂತಿರುಗುತ್ತದೆ.

ಒಂದು ಕಡೆ ಕಬ್ಬಿನ ಆಲೆಯಾಗುತ್ತಿರುವಲ್ಲಿಗೆ ಬ್ರಾಹ್ಮಣ ಮಾಣಿ ರೂಪದಲ್ಲಿ ಹೋಗಿ—ಆಳುಗಳಲ್ಲಿ ಬಾಯಾರಿಕೆಗೆ ಕಬ್ಬಿನ ರಸ ಕೇಳುತ್ತದೆ. ಆಳುಗಳು ಉಪೇಕ್ಷೆ ಮಾಡಿ ಮಾಣಿಯನ್ನು ಗೇಲಿ ಮಾಡುತ್ತಾ ಧನಿಯ ಮನೆಗೆ ಹೋಗಿ ಕೇಳು ಎನ್ನುತ್ತಾ ನಿರಾಕರಿಸುತ್ತಾರೆ. ಭೂತ ಮತ್ತೆ ಕೆಂದ ಪಾತೆಯ ರೂಪತಾಳಿ ಆಲೆಯ ಕೊಡಿ ಮರದಲ್ಲಿ ಕುಳಿತುಕೊಳ್ಳುತ್ತದೆ. ಕಬ್ಬಿನ ಹಾಲು ನೆತ್ತರಾಗುತ್ತದೆ. ಗಾಣದೆತ್ತುಗಳು ಕಲ್ಲಾಗುತ್ತವೆ. ವಿಚಿತ್ರವನ್ನು ಧನಿಗೆ ಹೇಳಿಕೊಂಡಾಗ ಆತನಿಗೆ ಮತ್ತೆ ಮಾಣಿಯಾಗಿ ಕಾಣಿಸಿಕೊಳ್ಳುತ್ತದೆ. ಆತನನ್ನು ಹಿಡಿದು ಜನಿವಾರ ತುಂಡು ಮಾಡಿ, ಹುಳಿ ಕಳ್ಳು ಕುಡಿಸಿ, ಹಸಿ ಕೋಳಿ ತಿನ್ನಿಸಲು ಆಳುಗಳಿಗೆ ಹೇಳುತ್ತಾನೆ. ಮಾಣಿ ಅದೃಶ್ಯವಾಗಿ ಆಳುಗಳಿಗೆ ಕುಡಿಯಲು ಕೊಟ್ಟ ಗಂಜಿ ತೆಳಿಯಲ್ಲಿ ಸೇರಿಕೊಳ್ಳುತ್ತದೆ. ಅದನ್ನು ಕುಡಿದ ಆಳುಗಳು ಧನಿಯನ್ನು ಅಟ್ಟಿಸಿಕೊಂಡು ಹೋಗುತ್ತಾರೆ. ಆಗ ಭೂತ ಪ್ರತ್ಯಕ್ಷವಾಗುತ್ತದೆ. ಧನಿ ಆಕೆಯನ್ನು ಶರಣುಹೋಗಿ ನಂಬಿ ನಡಕೊಳ್ಳುವುದಾಗಿ ಒಪ್ಪಿಕೊಳ್ಳುತ್ತಾನೆ. ಭೂತಕ್ಕೆ ಪೂಜಾರಿಯಾಗಲು ಯಾರೂ ಒಪ್ಪಿಕೊಳ್ಳದಿದ್ದಾಗ ಶಿರಾಡಿಗೌಡ ಎಂಬುವನು "ನನ್ನ ಹೆಸರು ಭೂತಕ್ಕೆ—ಭೂತದ ಹೆಸರು ನನಗೆ ಆಗುವುದಾದರೆ—ಪೂಜಾರಿಯಾಗುತ್ತೇನೆ" ಎಂದು ಒಪ್ಪಿಕೊಳ್ಳುತ್ತಾನೆ. ಭೂತಕ್ಕೆ ಬಂದ ಹೆಸರಿನಿಂದ ಶಿರಾಡಿಘಾಟಿ ಪ್ರಖ್ಯಾತವಾಗುತ್ತದೆ.

ಕೆಲವು ಕಾಲದ ನಂತರ ಪಕ್ಕದ ಊರು 'ರೆಕ್ಯ' ಎಂಬಲ್ಲಿ ನಾನಾ ಬಗೆ ರೋಗರುಜಿನಗಳು ಕಾಣಿಸಿಕೊಳ್ಳುತ್ತದೆ. ಆಗ

[ಪುಟ 13ಕ್ಕೆ ಮುಂದುವರಿದಿದೆ]

ಗಂಗರಸರ ರಾಜಧಾನಿ ತಲಕಾಡು

[ಮುಂದುವರೆದ ಭಾಗ]

ಅಲ್ಲದೆ ಮೇಲ್ಕಂಡ ಗ್ರಂಥಗಳನ್ನು ಬರೆದಿರುವವರು ಅಚ್ಚ ಕನ್ನಡಿಗರೂ, ಕರ್ನಾಟಕದವರೂ ಆದ ವಿದ್ವಾಂಸರುಗಳೇ. ಹೊರಗಿನವರುಗಳಾದ ಡಾ|| ಲೂಯಿರೈಸ್‌ರವರು ಬರೆದಿರುವಂತೆ ನಿಷ್ಪಕ್ಷಪಾತವಾಗಿ ದೇಶಿಯರು ಬರೆದಿಲ್ಲ. 2 ವರ್ಗದ ವಿದ್ವಾಂ-

ಟಿ. ಆರ್. ಮುದ್ದೇಗೌಡ, ಮೈಸೂರು

ಸರುಗಳು ಒಂದೇ ಶಿಲಾಶಾಸನಗಳು ತಾಮ್ರ ಶಾಸನಗಳು ಗ್ರಂಥಗಳ ವಿಮರ್ಶೆ ಮಾಡಿದ್ದರೂ ಕೂಡ ಒಂದೇ ದಿಕ್ಕಿನಲ್ಲಿ ಆಲೋಚನೆ ಬಾವನೆಗಳನ್ನು ಮಾಡಿ ಬರೆದಿಲ್ಲವಷ್ಟೆ.

ಹೊರಗಿನ ವಿದ್ವಾಂಸರುಗಳು ಖಡಾಖಂಡಿತವಾಗಿ ಇದ್ದ ವಿಚಾರಗಳನ್ನು ಸ್ಪಷ್ಟಪಡಿಸಿರುವಂತೆ, ಸ್ಥಳೀಯ ವಿದ್ವಾಂಸರು ಸ್ಪಷ್ಟಪಡಿಸಿಲ್ಲ. ಇದರಿಂದ ಸತ್ಯಕ್ಕೆ ಅಪಚಾರವೆಸಗಿದಂತಾಗಿದೆ.

ಥರ್ಮಸ್ಟನ್‌ರವರು ನಿಖರವಾಗಿ ತಲಕಾಡಿನ ಗಂಗರು–ಬೆಳ್ಳಾಳರು ಕೊಂಕಣೀವರ್ಮನ ವಂಶಸ್ಥರು [ಧಡಿಗ–ಮಾಧವ] ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿರುತ್ತಾರೆ. ಅವರು ಯಾವ ಜಾತಿಗೆ ಸೇರಿದವರು, ಉತ್ತರದ ಗಂಗರು ಇವರುಗಳ ಸಂಬಂಧಗಳು ಹಾಗೂ ಯಾವಸಂಪ್ರದಾಯಕ್ಕೆ ಸೇರಿದ್ದು, ತಮಿಳುನಾಡಿನ ಕಡೆಯಿಂದ ಬಂದವರಾದರೂ ತಲಕಾಡಿನವರೇ ಹೇಗಾದರು ? ಎಂಬುದಕ್ಕೆ ವಿವರವಾಗಿ ಅರ್ಥವಾಗುವ ಹಾಗೆ ಬರೆದು ಗಂಗರು ಮೂಲತಃ ತಲಕಾಡಿನವರು, ತಲಕಾಡಿನ ರಾಜ್ಯಭಾರ ಮಾಡಿದವರು, ಹಾಗೆ ರಾಜ್ಯಭಾರ ಮಾಡುವಾಗ ಪಾಂಡ್ಯೊ, ಕೊಂಗುದೇಶ ಮತ್ತು ಮಧುರೈ ಪ್ರಾಂತ್ಯವನ್ನು ಗೆದ್ದು ಆಡಳಿತ ಸ್ಥಾಪಿಸಿದರು. ಕೊಂಗು ದೇಶವನ್ನು ಗೆದ್ದು ತಮ್ಮ ಅಧೀನಕ್ಕೆ ಒಳಪಡಿಸಿಕೊಂಡ ನಂತರ ಕೊಂಗಣೀವರ್ಮನೆಂಬ ಬಿರುದು ಬಂದಿರುತ್ತದೆ. ಅಲ್ಲದೆ ಪಾಂಡ್ಯರೊಂದಿಗೆ ರಕ್ತ ಸಂಬಂಧವನ್ನು ಬೆಳೆಸಿರುವುದು ಎಲ್ಲರಿಗೂ ತಿಳಿದಿರುವಂತಹ ವಿಷಯವಾಗಿದೆ. ಆದ್ದರಿಂದ ಇವರಿಗೆ ಕೊಂಗಣೀವರ್ಮರೆಂದು ಬಿರುದು ಬಂದಿದ್ದು ಅದನ್ನು ಆ ವಂಶಸ್ಥರು ಪ್ರತಿಯೊಬ್ಬರೂ ಕೊಂಗಣಿವರ್ಮರೆಂಬ ಬಿರುದನ್ನು ಉಪಯೋಗಿಸುತ್ತಿದ್ದದನ್ನು ಇತಿಹಾಸಕಾರರು ಸ್ಪಷ್ಟವಾಗಿ ಹೇಳಿರುತ್ತಾರೆ. ಹಾಗೆ ಈ ವಂಶದವರು ವೆಳ್ಳಾಳ ಜಾತಿಗೆ ಸೇರಿದವರೆಂದೂ ನಂತರ ಬೆಳ್ಳಾಳರೆಂದು ಕರೆಯುವ ಪ್ರತೀತಿಯಾಯಿತು. [ವೆಳ್ಳಾಳ ಅಥವಾ ಬೆಳ್ಳಾಳ ಎರಡು ಪದಗಳು ಒಂದೇ ಜಾತಿಗೆ ಸೇರಿದವು] ಪ್ರಾಯಶಃ ಸಂಸ್ಕೃತದ ಸೂತ್ರ ಇದನ್ನು ಪುಷ್ಟೀಕರಿಸುತ್ತದೆ.–ವ ಬಯೋ : ಅಬೇದ. ಆ ವಂಶಸ್ಥರು ರಾಜ್ಯವಾಳಿದ ಪ್ರದೇಶಕ್ಕೆ ಗಂಗವಾಡಿ 96000 ಎಂಬುದಕ್ಕೂ ವಿವರಣೆ ಕೊಟ್ಟಿರುತ್ತಾರೆ. ಅವುಗಳೆಲ್ಲದರ ಆಧಾರದ ಮೇಲೆ ತಲಕಾಡಿನ ಗಂಗರು ಒಕ್ಕಲಿಗರ ಬಣಕ್ಕೆ ಸೇರಿದವರೆಂದು ಖಚಿತವಾಗಿ ಹೇಳಬಹುದು. ಅಂದ ಮೇಲೆ ತಲಕಾಡು ಬೆಳ್ಳಾಳ ಅಥವಾ ವೆಳ್ಳಾಳ ಒಕ್ಕಲಿಗರು ತಲಕಾಡಿನ ಗಂಗ ವಂಶಸ್ಥರೆಂದೇ ತಿಳಿಯುವುದರಲ್ಲಿ ಸಂಶಯವಿಲ್ಲವೆಂದು ನಮ್ಮ ಅಭಿಪ್ರಾಯವಾಗಿದೆ.

ಈ ಥರ್ಮಸ್ಟನ್‌ರವರ ಹಾಗೂ ಕೊಂಗು ದೇಶ ರಾಜಕಲ್ ಗ್ರಂಥ ಮತ್ತು ದೊರೆತಿರುವ ಎಲ್ಲಾ ಶಿಲಾ ಶಾಸನಗಳನ್ನು ಅಧ್ಯಯನ ಮಾಡಿದಾಗ ಹೊರ ಹೊಮ್ಮುವ ಜೀವಂತ ನಿದರ್ಶನ ವೆಳ್ಳಾಳರೇ ಮೂಲ ಗಂಗರು ಹಾಗೂ ರಾಜ್ಯ ಸ್ಥಾಪಕರೆಂದು ತಿಳಿದು ಬರುತ್ತದೆ. ಈ ವಂಶಸ್ಥರು ಬೇಲೂರು ಹಳೇಬೀಡುಗಳ ಆಸುಪಾಸುವಿನಲ್ಲಿ [ಅರಸೀಕೆರೆ ಹಾರನಹಳ್ಳಿ] ಗಳಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿಯೂ ಬಲ್ಲಾಳ ಅಥವಾ ರೆಡ್ಡಿ ಜನಾಂಗ ಒಕ್ಕಲಿಗರೆಂದು ಈಗಲೂ ಕರೆಯಲ್ಪಡುತ್ತಿರುವ ಜನಾಂಗವೆನಿಸಿದ್ದಾರೆ. ಮಹಮದಿಯರ ಆಳ್ವಿಕೆಯ ಕಾಲಕ್ಕೆ ಈ ಜನಾಂಗವು ದಿಕ್ಕೆಟ್ಟು ಚಲ್ಲಾಪಿಲ್ಲಿಯಾಗಿ ತಮ್ಮ ನಿಜ ಅಸ್ತಿತ್ವದ ಕಡೆಗೆ ಗಮನಕೊಡದೇ ಮೂಲೆ ಗುಂಪಾದವರು ಹಾಗೂ ತಮ್ಮ ಮೂಲ ಕಸುಬಾದ ಒಕ್ಕಲುತನವನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ ಅನೇಕ ವಿದ್ವಾಂಸರು ಜೀವಂತ ವಂಶದ ಕಡೆಗೆ ವಿಚಾರಮಾಡದೇ ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ಈ ವೆಳ್ಳಾಳ ಅಥವಾ ಬೆಳ್ಳಾಳ ಜನಾಂಗದ ಆತ್ಮ ಗೌರವಕ್ಕೆ ಬರಿಸಲಾರದಂತಹ ನೋವನ್ನುಂಟುಮಾಡಿದೆ. ತಲಕಾಡು ಗಂಗರ [ವೆಳ್ಳಾಳ : ಬೆಳ್ಳಾಳ] ವಂಶಸ್ಥರ ಶಿಲಾ ಶಾಸನಗಳು ತಾಮ್ರ ಶಾಸನಗಳಲ್ಲಿ ಕಂಡು ಬರುವ ವಿವರಣೆಗಳಲ್ಲಿ ಗಂಗರ ಮೂಲ ಪುರುಷರು ಗಂಗಪೆರೂರಿನಿಂದ ಅಂದರೆ ಧರ್ಮಪುರಿ, ಕೊಯಮತ್ತೂರು, ಸೇಲಂ ಕೊಂಗುದೇಶದಿಂದ ಬಂದವರಾಗಿರುತ್ತಾರೆ. ಕೊಂಗು ಎಂಬುದು ದೇಶ, ಕೋರೆಗೇರಿ ಎಂಬುದು ಬಿರುದಾಗಿರುವುದರಿಂದ ಪ್ರತಿ ಗಂಗ ರಾಜರು ಕೊಂಕಣೀವರ್ಮ ರಾಜತಿಲಕ ರಾಜಾಧಿರಾಜ ಪೆರ್ಮಾನಡಿ ಎಂಬ ಬಿರುದನ್ನು ಹೊಂದಿರುತ್ತಾರೆ. ಇದರ ಜೊತೆಗೆ [ವೈ] ಕೊಂಡೈಮಂಡಲ ಎಂಬ ಬಿರುದನ್ನು ಸಹ ಪಡೆದಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ ತಲಕಾಡಿನಲ್ಲಿ

[12ನೇ ಪುಟ ನೋಡಿ]

ಮಲೆ ತಮ್ಮಯ್ಯ ಮೃತ್ಯುವಿನಿಂದ ಕಾಪಾಡ್ದ

ಹದಿನೈದು ವರ್ಷಗಳ ಹಿಂದೆ ಪಶ್ಚಿಮ ಘಟ್ಟಗಳ ಏಲಕ್ಕಿ ಬೆಟ್ಟ ಸಾಲುಗಳಲ್ಲಿರುವ ಚಂಗರಖಾನ ಎಂಬಲ್ಲಿ ನಮಗೆ 150 ಎಕ್ರೆ ಗೇಣಿಮಲೆ ಇತ್ತು. ಇದರಲ್ಲಿ ಸಮೃದ್ಧವಾದ ಏಲಕ್ಕಿ ತೋಟವಿತ್ತು. ನಾಡಿನಿಂದ ಸುಮಾರು 12 ಕಿ.ಮೀ. ದೂರದಲ್ಲಿ ದಟ್ಟಾರಣ್ಯದಲ್ಲಿರುವ ಈ ಏಲಕ್ಕಿಮಲೆ ತೋಟದ ಕೆಲಸವನ್ನು ನಮ್ಮ ಅಪ್ಪನವರು ತಾವೇ ನಿಂತು ಮಾಡಿಸುತ್ತಿದ್ದರು. ಪರಿಚಯದ ಮೇಸ್ತ್ರಿಗಳು ಸಂಪಾಜೆ ಮತ್ತು ಸುಳ್ಯಗಳಿಂದ ಕೆಲ

ಬೈತಡ್ಕ ಹೇಮ ಕುಂಜಪ್ಪ, ಪಾಲೂರು.

ಸಕ್ಕೆ ಜನರನ್ನು ಕರೆತರುತ್ತಿದ್ದರು. ಏಲಕ್ಕಿ ಸಮಯದಲ್ಲಿ ಈ ಜನರೊಡನೆ ಅಪ್ಪನವರು ತೋಟದ ಬಿಡಾರ [ಗುಡಿಸಲು] ದಲ್ಲಿಯೇ ಇರುತ್ತಿದ್ದರು. 15–20 ದಿನಗಳಿಗೊಮ್ಮೆ ಭಾಗಮಂಡಲದ ಪೇಟೆಗೆ ಬಂದು ಅಡಿಗೆಗೆ ಬೇಕಾದ ವಸ್ತುಗಳನ್ನು ಖರಿದಿಸಿ ಮಲೆಯಲ್ಲಿರುವ ಬಿಡಾರಕ್ಕೆ ಕಳುಹಿಸಿಕೊಡುತ್ತಿದ್ದರು.

ಆ ವರ್ಷದ ಅಕ್ಟೋಬರ್ ತಿಂಗಳಲ್ಲಿ ತಂದೆಯವರು ಒಮ್ಮೆ ಮಲೆ ತೋಟದಿಂದ ಮನೆಗೆ ಬಂದಿದ್ದರು. ಬಿಸಿ ನೀರಿನಲ್ಲಿ ಸ್ನಾನಮಾಡಿ ನಡೆದುಕೊಂಡು ಬಂದ ಆಯಾಸ ಪರಿಹಾರಕ್ಕಾಗಿ ಪಡಶಾಲೆಯಲ್ಲಿ ಅವರ ಮಾಮೂಲು ಖುರ್ಚಿಯಲ್ಲಿ ಕುಳಿತು ಉಸ್ಸಪ್ಪ, ಮಕ್ಕಳ ಪುಣ್ಯ, ಬದುಕಿ ಬಂದೆ ಎಂದು ನಿಟ್ಟುಸಿರು ಬಿಟ್ಟರು. ಈ ಮಾತು ಕೇಳಿ ಅಡಿಗೆ ಮನೆಯಲ್ಲಿದ್ದ ನಮ್ಮ ಅವ್ವ ಅಲ್ಲಿಗೆ ಬಂದು ಏನಾಯಿತೆಂದರು ಕಾತರದಿಂದ. ಓದುತ್ತಾ ಕುಳಿತಿದ್ದ ನಾವು ಓದು ನಿಲ್ಲಿಸಿ "ಅಪ್ಪ ಏನಾಯಿತು?" ಎಂದು ಕೇಳಿದೆವು. ಆಗ ಅವರು ಹೇಳಿದ ಘಟನೆಯ ಬಗ್ಗೆ ಅವರ ಮಾತುಗಳಿಂದಲೇ ಕೇಳೋಣ.

ಬಿಡಾರದಲ್ಲಿ ಗೂಡು ತುಂಬಾ ಏಲಕ್ಕಿ ಇತ್ತು. ಸಂಜೆ ಕೆಲಸದವರೆಲ್ಲ ಕೆಲಸ ಮುಗಿಸಿ ಬಿಡಾರಕ್ಕೆ ಬಂದಿದ್ದರು. ಅಡಿಗೆ ಕೆಲಸ ಸುರುವಾಯಿತು. "ಯಜಮಾನ್ರೆ, ಪದಾರ್ಥಕ್ಕೆ [ಸಾಂಬಾರು–ಪಲ್ಯಕ್ಕೆ] ಏನೂ ಇಲ್ಲ. 'ಉಪ್ಪೊಣ' ಮಾಂಸ [ಒಣಗಿಲು] ಮುಗಿದಿದೆ. ಕೋವಿ ತೆಗೆದುಕೊಂಡು ಹೋದರೆ ಕೆಂಜರಿ–ಗಿಂಜರಿ [ದೊಡ್ಡ ಗಾತ್ರದ ಕಾಡಳಿಲು] ಸಿಗಬಹುದು" ಎಂದ ಒಬ್ಬ ಕೆಲಸದವ. ಬೆಳಗ್ಗಿನಿಂದ ಬಿಡಾರದಲ್ಲೇ ಇದ್ದು ಏಲಕ್ಕಿ ಒಣಗಿಸುವ ಕೆಲಸ ಮಾಡಿದ್ದ ನನಗೂ ಬೇಜಾರಾಗಿತ್ತು. ನಮ್ಮ ಡಬಲ್ ಬ್ಯಾರಲ್ ತೋಟೆಯ ಕೋವಿಯನ್ನು ಹಿಡಿದುಕೊಂಡು ತೋಟದೊಳಗೆ ಹೊರಟೆ. ಸುಮಾರು ಮೂರು ಫರ್ಲಾಂಗ್ ದೂರ ಹೋಗಿರಬಹುದು. ಒಂದು ಹಣ್ಣಿನ ಮರದಲ್ಲಿ ಎರಡು ಕೆಂಜರಿಗಳು ಹಣ್ಣು ತಿನ್ನುತಿದ್ದುದ್ದನ್ನು ಕಂಡೆ. ಆ ಮರ ಸುಮಾರು 50 ಅಡಿ ಎತ್ತರದ, ಬಂಡೆಕಲ್ಲುಗಳಿಂದ ಕೂಡಿದ ದಿಣ್ಣೆಯ ಅಚೆಗಿದೆ. ಆ ದಿಣ್ಣೆಯ ಮೂರು ಬದಿಗಳು ನೇರ ಇಳಿಜಾರಾಗಿದ್ದು, ವಿಪರೀತ ಬೆತ್ತದ ಮುಳ್ಳುಗಳಿಂದ ತುಂಬಿತ್ತು. ಕಷ್ಟಪಟ್ಟರೆ ಕೇವಲ ಒಂದು ಬದಿಯಿಂದ ಮಾತ್ರ ಆ ದಿಣ್ಣೆಯ ಮೇಲೆ ಹತ್ತಿ ಹೋಗಬಹುದು. ಈ ತನಕ ಆ ದಿಣ್ಣೆಯ ಮೇಲೆ ಯಾರೂ ಹೋಗಿರಲಿಲ್ಲ. ಹೋಗುವ ಕೆಲಸವೂ ಇಲ್ಲ. ದಿಣ್ಣೆಯ ಮೇಲೆ ಮೆಲ್ಲನೆ ಹತ್ತಿ ಹೋಗಿ ಬಿಟ್ಟರೆ ಕೆಂಜರಿಗಳಿಗೆ ಹತ್ತಿರದಿಂದ ಗುಂಡು ಹೊಡೆಯಬಹುದುದೆಂದು ಭಾವಿಸಿದೆ.

ದಿಣ್ಣೆಯ ಮೇಲೆ ಹೋಗಿಬರಲು ನರಿಗಳೋ, ಕೆನ್ನಾಯಿಗಳೋ ಓಡಾಡಿ ಮಾಡಿಕೊಂಡಿದ್ದ ಸಣ್ಣ ದಾರಿ ಇತ್ತು. ಕೋವಿಯನ್ನು ಕೈಯಲ್ಲಿ ಹಿಡಿದು, ಬೆನ್ನು ಬಗ್ಗಿಸಿ, ಸದ್ದು ಮಾಡದೆ ಮೆಲ್ಲ ಮೆಲ್ಲನೆ ಹೆಜ್ಜೆ ಹಾಕಿ ದಿಣ್ಣೆಯ ತುದಿಗೆ ತಲುಪಿದೆ. ಬಂಡೆ ಕಲ್ಲೊಂದರ ಬದಿಯಲ್ಲಿ ಅಡಗಿಕೊಂಡೆ. ಕೆಂಜರಿಗಳು ತುಂಬ ಸಮೀಪದಲ್ಲಿದ್ದವು. ಒಂದಕ್ಕೆ ಬಲನಳಿಕೆಯಿಂದ ಗುಂಡು ಹಾರಿಸಿದೆ. ಅದು ನೆಲಕ್ಕೆ ಬಿತ್ತು. ಗುಂಡಿನ ಸದ್ದಿಗೆ ಹೆದರಿ ಇನ್ನೊಂದು ಇದ್ದಲ್ಲೇ ಅಲುಗಾಡದೆ ಕುಳಿತು ಬಿಟ್ಟಿತು. ಅದಕ್ಕೂ ಎಡನಳಿಕೆಯಿಂದ ಗುಂಡು ಹಾರಿಸಿದೆ. ಅದೂ ನೆಲಕ್ಕೆ ಬಿತ್ತು. ಕೆಂಜರಿಯದು ಗಟ್ಟಿ ಜೀವ. ಗುಂಡೇಟಿಗೆ ಕೆಳಗೆ ಬಿದ್ದರೂ ಕೂಡಲೇ ಹಿಡಿದುಕೊಳ್ಳದಿದ್ದರೆ ಪ್ರಾಣ ಹೋಗುವ ಮೊದಲು ದೂರ ಓಡಿಬಿಟ್ಟಿರುತ್ತವೆ. ಅವುಗಳನ್ನು ಹೆಕ್ಕಿಕೊಳ್ಳಲು ಬಂದ ದಾರಿಯಲ್ಲಿಯೇ ಕೆಳಗಿಳಿದು ಬಳಸುದಾರಿಯಲ್ಲಿ ಹೋಗಬೇಕಾಗಿತ್ತು. ಕೋವಿಗೆ ತೋಟೆಗಳನ್ನು ತುಂಬಿಕೊಂಡು ಬೇಗ ಬೇಗ ಕೆಳಗಿಳಿಯತೊಡಗಿದೆ.

ಸುಮಾರು 7–8 ಅಡಿಗಳಷ್ಟು ಇಳಿದಿರಬಹುದು. ಆಗ ನನ್ನ ಎದುರಿಗಿದ್ದ ದೃಶ್ಯವನ್ನು ಕಂಡು ಭಯದಿಂದ ನಡುಗತೊಡಗಿದೆ. ನನ್ನಿಂದ ಕೇವಲ 5–6 ಅಡಿ ಅಂತರದಲ್ಲಿ ದೊಡ್ಡದೊಂದು ಕಾಳಿಂಗಸರ್ಪ ಹೆಡೆಬಿಚ್ಚಿ ಆಳೆತ್ತರಕ್ಕೆ ನಿಂತು ಬಿಟ್ಟಿತ್ತು. ಒಟ್ಟೊಟ್ಟಿಗೆ ಎರಡು ಗುಂಡುಗಳ ಸದ್ದಿನ ಜೊತೆಗೆ ಅವಸರದಲ್ಲಿ ಇಳಿದುಬರುತ್ತಿದ್ದ ನನ್ನನ್ನು ಕಂಡು ಅಲ್ಲೆಲ್ಲೋ ಸಮೀಪದಲ್ಲಿ ಇದ್ದ ಅದು ಹೆದರಿರಬೇಕು. ಆಕ್ರಮಣಕ್ಕೆ ಸಿದ್ಧವಾದ ಭಂಗಿಯಲ್ಲಿ ನನ್ನನ್ನೇ ನೋಡುತಿತ್ತು. ನನಗೆ ತಪ್ಪಿಸಿಕೊಂಡು ಹೋಗಲು ಬೇರೆ ದಾರಿಯೇ ಇರಲಿಲ್ಲ. ನನ್ನ

ಆಯುಸ್ಸು ಮುಗಿಯಿತೆಂದೇ ತಿಳಿದೆ. ಕಾಪಾಡಬೇಕೆಂದು ಮತೆ ತಮ್ಮಚ [ಮಲೆ ಕಾಡುಗಳಲ್ಲಿದೆ ಎಂದು ನಂಬಲಾಗುವ ಒಂದು ವನದೇವತೆ]ನನ್ನು ನಡಗಿಕೊಂಡೇ ಮನಸ್ಸಿನಲ್ಲಿ ಪ್ರಾರ್ಥಿಸ ತೊಡಗಿದೆ.

ತಮ್ಮಚ ಕಾಪಾಡುತ್ತಾನೆ. ಕಾಡಿನಲ್ಲಿ ಅವನಲ್ಲದೆ ಮತ್ತಾರು ಗತಿ. ಅಷ್ಟರಲ್ಲಿ ತಲೆಯಲ್ಲಿ ಏನೋ ಹೊಳೆಯಿತು. ಹಾವಿನ ದೃಷ್ಟಿಯನ್ನು ಬದಲಿಸಲು ಕ್ಷಣಮಾತ್ರದಲ್ಲಿ ನನ್ನ ಶರ್ಟನ್ನು ಬಿಚ್ಚಿ ಆ ಕಡೆಯ ಮುಳ್ಳು ಪೊದೆಯ ಮೇಲೆ ಎಸೆದೆ. ತಕ್ಷಣ ಹಾವು ಹೆಡೆಯನ್ನು ಆ ಕಡೆಗೆ ಹೊರಳಿ ಕುಟುಕಿತು. ಇದನ್ನೇ ಕಾಯುತ್ತಿದ್ದ ನಾನು ಅದರ ಹೆಡೆಗೆ ಗುರಿಯಿಟ್ಟು ಬಂದೂಕಿನ ಎರಡೂ ನಳಿಕೆಯಿಂದ ಗುಂಡು ಹಾರಿಸಿದೆ. ಹಾವು ಆಕಡೆ ಹೊರಳಿದಂತೆ ಕಂಡಿತು. ಕೂಡಲೇ ನಾನು ಕಲ್ಲು ಮುಳ್ಳುಗಳನ್ನು ಲೆಕ್ಕಿಸದೆ ಓಡುತ್ತಾ ದಿಣ್ಣೆಯಿಂದ ಕೆಳಗಿಳಿದೆ. ಓಡಿಕೊಂಡೇ ಬಿಡಾರಕ್ಕೆ ಬಂದೆ. ಸೀದಾ ಒಳಗೆ ನುಗ್ಗಿ ಚಾಪೆಯ ಮೇಲೆ ಕುಳಿತೆ. ಮೈ ಕೈ ಎಲ್ಲಾ ಮುಳ್ಳುಗಳಿಂದ ತರಚಿಹೋಗಿ ರಕ್ತ ಸೋರುತ್ತಿತ್ತು. ಮೃತ್ಯುವಿನಿಂದ ಪಾರಾದುದಕ್ಕೆ ತಮ್ಮಚ ನಿಗೆ ಇನ್ನೊಮ್ಮೆ ಮನಸ್ಸಿನಲ್ಲೇ ವಂದಿಸಿದೆ.

ಆ ಅವಸ್ಥೆಯಲ್ಲಿ ನನ್ನನ್ನು ಕೆಲಸದವರು ಎಂದೂ ಕಂಡಿರಲಾರರು. ಗುಂಡುಗಳ ಸದ್ದು ಅವರಿಗೆ ಕೇಳಿರಬೇಕು. ಒಂದೇ ಗುಂಡು ಹೊಡೆದರೂ ಬರಿಗೈಯಲ್ಲಿ ಬರುವವನಲ್ಲ ನಾನು. ಈಗ ನಾಲ್ಕು ಗುಂಡುಗಳನ್ನು ಹೊಡೆದರೂ ಬರಿಗೈಯಲ್ಲಿ ಬಂದು ಏದುಸಿರು ಬಿಡುತ್ತಾ ಕುಳಿತ ನನ್ನನ್ನು ಕಂಡು ಕೆಲಸ ದವರಿಗೆ ಆಶ್ಚರ್ಯವಾಗಿರಬೇಕು. ಎಲ್ಲರೂ ನನ್ನ ಸುತ್ತ ಸೇರಿಬಿಟ್ಟರು.

"ಯಜಮಾನ್ರೆ, ನಾಲ್ಕು ಗುಂಡುಗಳ ಸದ್ದು ಕೇಳಿತು ! ಕೈಯಲ್ಲಿ ಏನೂ ಇಲ್ಲ ! ಇದೆಂತಹ ತರಚುಗಾಯಗಳು" ಎಂದ ಮೇಸ್ತ್ರಿ. "ಕಾಳಿಂಗ ಸರ್ಪಕ್ಕೆ ಗುಂಡು ಹೊಡೆದೆ" ಎಂದೆ. ಈ ಮಾತು ಕೇಳಿ ಒಬ್ಬ 'ಅಯ್ಯಯ್ಯೋ !! ಕಾಳಿಂಗ ಸರ್ಪ ! ಸತ್ತಿತೋ ಇಲ್ಲವೋ ? ಅದು ಉಳಿದಿದ್ದರೆ ನಮಗೆ ಉಳಿಗಾಲ ವಿಲ್ಲ" ಎಂದ ಭಯದಿಂದ."ಅದರ ಮೈಯಲ್ಲಿ ವಿಪರೀತ ಕೊಬ್ಬು. ಗುಂಡಿನ ಗಾಯ 5–10 ನಿಮಿಷದಲ್ಲಿ ಮುಚ್ಚಿ ಹೋಗುತ್ತದೆ. ಅದಕ್ಕೆ ಏನೂ ಆಗುವುದಿಲ್ಲ. ಹಗೆ ಸಾಧಿಸಲು ಬಿಡಾರಕ್ಕೆ ಬರದೆ ಇರಲಾರದು" ಎಂದ ಇನ್ನೊಬ್ಬ. "ಅದು ತಲೆಗೇ ಹೊಡೆಯು ವುದು. ಅದರ ಹೊಡೆತಕ್ಕೆ ತಲೆಯ ಮೇಲೆ ರಾಗಿಕಲ್ಲು ಇದ್ದರೂ ಒಡೆದುಹೋಗುತ್ತದೆ" ಎಂದ ಮತ್ತೊಬ್ಬ. "ಕಾಳಿಂಗ ಸರ್ಪ ಒಂದೇ ಇರುವುದಿಲ್ಲ. ಅದರ ಜೊತೆ ಇನ್ನೊಂದು ಇದ್ದೇ ಇರು ತ್ತದೆ. ಒಂದು ವೇಳೆ ಗುಂಡು ತಾಗಿ ಸತ್ತಿದ್ದರೂ ಅದರ ಜೊತೆ ಯದು ಹಗೆ ಸಾಧಿಸದೆ ಬಿಡದು. ನಾವು ಊರಿಗೆ ಹೋಗಿ ಬಿಟ್ಟರೆ ಹೇಗೆ ?" ಎಂದ ಅವರಲ್ಲಿ ಹಿರಿಯ.

ಮಲೆನಾಡಿನಲ್ಲಿ ಹಲವಾರು ವರ್ಷಗಳ ಕಾಲ ಕೆಲಸ ಮಾಡಿ ಅನುಭವವಿದ್ದ ಅವರ ಮಾತುಗಳಲ್ಲಿ ಹಳ್ಳಿಯ ಜನರು ಕಾಳಿಂಗ ಸರ್ಪದ ಬಗ್ಗೆ ಹೊಂದಿರುವ ನಂಬಿಕೆಗಳ ಸೊಗಡು ಅಡಗಿತ್ತು. ನನಗೂ ವಿಷಯಗಳೆಲ್ಲಾ ಗೊತ್ತು. ಆದರೆ ನಾನೇ ಹೆದರಿದರೆ ಹೇಗೆ. "ಸುಮ್ಮನೆ ಊಟ ಮಾಡಿ ಮಲಗಿ, ಏನೂ ಆಗುವುದಿಲ್ಲ. ಏನಿದ್ದರೂ ನಾಳೆ ನೋಡುವ" ಎಂದೆ. ಎಲ್ಲರೂ ಸುಮ್ಮನಾದರು. ಆಗ ರಾತ್ರಿ ಸುಮಾರು 8 ಗಂಟೆಯಾಗಿತ್ತು. ಎಲ್ಲರೂ ಊಟಮಾಡಿ ಮಲಗಿದರು. ನಾನೂ ನನ್ನ ಪ್ರತ್ಯೇಕ ಚಾಪೆಯ ಮೇಲೆ ಮಲಗಿದೆ. ಕೋವಿಯನ್ನು ಲೋಡ್‌ಮಾಡಿ ಬದಿಯಲ್ಲಿ ಇಟ್ಟುಕೊಂಡೆ. ದೀಪ ಹಚ್ಚಿ ಇಟ್ಟದ್ದೇ. ಆದರೆ ನನಗೆ ನಿದ್ರೆಯೇ ಬರಲಿಲ್ಲ. ಬೆಳಕು ಹರಿಯುವುದನ್ನೇ ಎದುರು ನೋಡುತ್ತಿದ್ದೆ.

ಬೆಳಗಾಯಿತು. ಮೇಸ್ತ್ರಿ ಕಣ್ಣಚಾಯ [ಹಾಲಿಲ್ಲದ ಚಾ] ತಂದುಕೊಟ್ಟ. "ಈ ದಿನ ಕೆಲಸಬೇಡ. ಆ ಹಾವಿನ ಕಥೆ ಏನಾಗಿದೆ ಎಂದು ನೋಡಿಬಿಡುವ. ಇಬ್ಬರೂ ಗೂಡಿನಲ್ಲಿರುವ ಏಲಕ್ಕಿ ಕೆಲಸಕ್ಕ ಬಿಡಾರದಲ್ಲಿ ನಿಂತರೆ ಸಾಕು. ಉಳಿದವರು ನನ್ನೊಟ್ಟಿಗೆ ಹೊರಡಿ" ಎಂದೆ. ಎಲ್ಲರ ಮುಖದಲ್ಲೂ ಕುತೂಹಲ ಇದ್ದಂತೆ ಕಂಡಿತು.

ನಾನು ಕೋವಿಯನ್ನು ತೆಗೆದುಕೊಂಡು ಹೊರಟೆ. ದೊಣ್ಣೆ, ಕತ್ತಿ ಹಿಡಿದುಕೊಂಡು ಕೆಲಸದವರು ಹೊರಟರು. "ಜಾಗ್ರತೆ ಇರಬೇಕು. ಮಕ್ಕಳಾಟ ಮಾಡಬೇಡಿ" ಎಂದು ಅವ ರಿಗೆ ಎಚ್ಚರಿಕೆ ಕೊಟ್ಟೆ. ಬಹಳ ಎಚ್ಚರಿಕೆಯಿಂದ ದಿಣ್ಣೆಯ ಮೇಲೇರಿ ಹೋದೆವು. ಹಾವು ಇದ್ದ ಜಾಗದಲ್ಲಿ ಗಿಡಗಂಟೆಗಳು ಪುಡಿ ಪುಡಿಯಾಗಿರುವುದನ್ನು ದೂರದಿಂದಲೇ ಕಂಡೆವು. ಸಾವು ಬದುಕಿನ ಮಧ್ಯೆ ಅದು ಹೋರಾಡಿರುವುದು ಖಚಿತವಾಯಿತು. ಸ್ವಲ್ಪ ಮುಂದೆ ಹೋದಾಗ ಹಾವು ದಾರಿಯ ಬದಿಯಲ್ಲೇ ಹೊಟ್ಟೆ ಮೇಲಾಗಿ ಸತ್ತುಬಿದ್ದಿತ್ತು. ಅತೀ ಸಮೀಪದಿಂದ ಎರಡು ಗುಂಡುಗಳು ಹಾರಿದ್ದರಿಂದ ಅದರ ಹೆಡೆಯು ಛಿದ್ರ ಛಿದ್ರವಾಗಿತ್ತು. ಅದನ್ನು ಕೊಲ್ಲುವ ಪರಿಸ್ಥಿತಿ ಬಂದುದಕ್ಕಾಗಿ ನನಗೆ ತುಂಬ ದುಃಖವಾಯಿತು.

ಕೆಲಸದವರು ಬಡಿಗೆಗಳ ಸಹಾಯದಿಂದ ಹಾವಿನ ಹೆಣ ವನ್ನು ದಾರಿಗೆ ತಂದರು. ಅದರ ಕುತ್ತಿಗೆಗೆ ಬೆತ್ತದ ಹಗ್ಗವನ್ನು ಕಟ್ಟಿ ಒಂದು ಸಮತಟ್ಟಾದ ಜಾಗಕ್ಕೆ ಎಳೆದು ತಂದರು. ಗೇಣಿ

[15 ನೇ ಪುಟ ನೋಡಿ]

ಕರ್ನಾಟಕ ರಾಜ್ಯ ಅಂಚೆ ಮತ್ತು ತಂತಿ ಇಲಾಖೆಯ

12ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಮ್ಮ ಹುಡುಗಿಯ ಸಾಧನೆ

ಅಕ್ಟೋಬರ್ 97ರ ಮಧ್ಯದಲ್ಲಿ ಕರ್ನಾಟಕ ರಾಜ್ಯ ಅಂಚೆ ಮತ್ತು ತಂತಿ ಇಲಾಖೆಯ ವತಿಯಿಂದ 12ನೇ ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿತು. ಭರತ ನಾಟ್ಯ ವಿಭಾಗದಲ್ಲಿ **ಬಾರಿಕೆ ಯಶೋಧ ಮುತ್ತಪ್ಪರವರ** ಮಗಳು **ಬಿ. ಎಂ. ಶೀತಲ್** [11 ವರ್ಷ] ಪ್ರಥಮ ಸ್ಥಾನ ಪಡೆದು ಮುಂದಿನ ರಾಷ್ಟ್ರೀಯ ಮಟ್ಟದ ಸ್ಪರ್ಧೆಗಾಗಿ ಕಲ್ಕತ್ತಾಗೆ ತೆರಳಲಿದ್ದಾಳೆ. ಇವಳ ತಂದೆ ಬಾರಿಕೆ ಮುತ್ತಪ್ಪ ಮಡಿಕೇರಿ ಜಿಲ್ಲಾ ಪರಿಷತ್‌ನಲ್ಲಿ ಉದ್ಯೋಗಿ,; ತಾಯಿ



ಬಿ. ಎಂ. ಶೀತಲ್

ಯಶೋಧ ಅಂಚೆ ಮತ್ತು ತಂತಿ ಇಲಾಖೆ ಮಡಿಕೇರಿಯ ಕೋಟೆಯಲ್ಲಿ ಉದ್ಯೋಗ. ತಂದೆ ತಾಯಿ ಇಬ್ಬರು ಉದ್ಯೋಗಿಯಾಗಿದ್ದುಕೊಂಡು ಮಗಳನ್ನು ಉತ್ತಮ ಭರತನಾಟ್ಯ ಪಟುವನ್ನಾಗಿಸಿದ್ದು ಸಾಹಸವೇ ಸರಿ. ಶೀತಲ್ ಕೊಡಗು ವಿದ್ಯಾಲಯ ಕೊಡಗು ಇಲ್ಲಿ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಇವಳ ಅಣ್ಣ ನಿತಿನ್ I PUC ಓದುತ್ತಿದ್ದಾನೆ. ಇವನ ಪ್ರೋತ್ಸಾಹ ಬಹಳ ವಿತ್ತೆಂದು ತಿಳಿದು ಬಂದಿದೆ. ○

[9ನೇ ಪುಟದಿಂದ]

ಗಂಗರಸರ ರಾಜಧಾನಿ ತಲಕಾಡು

ಉತಖಲನ ಕಾಲದಲ್ಲಿ ದೊರೆಯುತ್ತಿರುವ ಗಂಗರ ಆಡಳಿತ ಕಾಲದ ರಾಜ ಲಾಂಛನಗಳು, ಟಂಕಶಾಲೆ, ರೋಮ್ ನಾಣ್ಯಗಳು ಶಿವಮಾರನ ಕಾಲದ ಮಣ್ಣಿನ ಮಡಿಕೆಗಳ ಮೇಲಿರುವ ಸುಂದರಲಿಪಿ ಮತ್ತು ಮುದ್ರೆಗಳನ್ನು ನೋಡುವಾಗ ಗಂಗರು ತಲಕಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಾಡಳಿತ ಮಾಡಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಅಲ್ಲದೆ ನಮ್ಮ ಅಭಿಪ್ರಾಯದಲ್ಲೂ ಆಸರೆ ದೊರೆಯುತ್ತದೆ. [ಮುಗಿಯಿತು]

-: ಸೂಕ್ತಿ :-

ಕತ್ತಲು ಕೋಣೆಯಲ್ಲಿ ಸಾವಿರ ವರ್ಷದ ಕತ್ತಲಿದ್ದರೂ ದೀಪವನ್ನು ಹಚ್ಚಿದೊಡನೆ ಕತ್ತಲು ಮಾಯವಾಗುವುದು.

—ಶ್ರೀ ರಾಮಕೃಷ್ಣ ಪರಮಹಂಸ

ಸಂಗ್ರಹ : **ಹೆಮ್ಮಟ್ಟೆ ಅರುಣ ಮುತ್ತಪ್ಪ**
ಸಿದ್ದಾಪುರ

ಭಾರತದಲ್ಲಿನ ಮೊದಲಿಗರ್ಯಾರು

1. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು–ಡಾ|| ರಾಜೇಂದ್ರಪ್ರಸಾದ್
2. ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿ–ಜವಹರಲಾಲ್ ನೆಹರು
3. ಭಾರತದ ಪ್ರಥಮ ಮಹಾ ದಂಡನಾಯಕ–ಜನರಲ್ ಕೊಡಂದೇರ ಕಾರ್ಯಪ್ಪ
4. ಪ್ರಥಮ ಗೌರ್ನರ್ ಜನರಲ್–ಸಿ. ರಾಜಾಗೋಪಾಲಚಾರಿ
5. ಪ್ರಪ್ರಥಮ ನೋಬಲ್ ಪಾರಿತೋಷಕ ವಿಜೇತರು–ರವೀಂದ್ರನಾಥ ಠಾಕೂರ್
6. ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಥಮ ಸ್ತ್ರೀ ಅಧ್ಯಕ್ಷೆ–ಶ್ರೀಮತಿ ಅನಿಬೆಸೆಂಟ್
7. ಯು.ಎನ್.ಒ.ದ ಅಧ್ಯಕ್ಷೆ–ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್
8. ವಿಕ್ಟೋರಿಯ ಕ್ರಾಸ್ ಪಾರಿತೋಷಕ ವಿಜೇತರು–ಕುದಲಡಖಾನ್.

○ **ಹುಲಿಮನೆ ರಾಮಣ್ಣ ಲೋಕೇಶ್**, ಮಡೆ.

: ನಗೆ ಹನಿ :

ಗಂಡ : ನಾನು ಇಂದು ಬಸ್ಸಿನಲ್ಲಿ ಬರದೆ ಬಸ್ಸಿನ ಹಿಂದಿನಿಂದ ಓಡಿಕೊಂಡು ಬಂದೆ ಬಸ್ಸಿಗೆ ಕೊಡುವ ಮೂವತ್ತೂ ಪೈಸೆ ಉಳಿಯಿತು ಕಣೆ.

ಹೆಂಡತಿ : ಅಯ್ಯೋ ನೀವೊಬ್ಬರು ಕಾರಿನ ಹಿಂದೆ ಓಡಿ ಬರುತ್ತಿದ್ದರೆ ಎಂಟನಾಣೆ ಉಳಿತಾಯವಾಗುತ್ತಿತ್ತು ಅಲ್ಲವೇನ್ರಿ.


ಸಂಗ್ರಹ : **ಮುದ್ದೇನ ಪ್ರವೀಣ್‌ಕುಮಾರ್**, ಮದೆನಾಡು.

1983ರಲ್ಲಿ ಮುಖ್ಯ ಮಂತ್ರಿಗಳ ಚಿನ್ನದ ಪದಕ ವಿಜೇತರಾದ ಚಾಲಕ ಕಟ್ರತನ ಮಾದಪ್ಪ

ತನ್ನ ಜೀವನದ ಕರ್ತವ್ಯದಲ್ಲಿ ದಕ್ಷ ಸೇವೆ, ಉತ್ತಮ ನಡತೆ, ಸೌಹಾರ್ದಯುತ ನಿಷ್ಠೆಯ ಚಾಲಕನಾಗಿ 29 ವರ್ಷಗಳ ಕಾರ್ಯತತ್ಪರತೆ ಮತ್ತು ಅಪಘಾತ ರಹಿತ ಸಂಬಂಧವಾಗಿ 1983ರಲ್ಲಿ ಮುಖ್ಯ ಮಂತ್ರಿಗಳ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿದ್ದಾರೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮಂಗಳೂರು ವಿಭಾಗದಲ್ಲಿ 29 ವರ್ಷಗಳಿಂದ ಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾಗ ಯಾವುದೇ ರೀತಿಯ ಅಪಘಾತ ಮಾಡಿಲ್ಲದ ಸರಳ ಸೌಜನ್ಯ ವ್ಯಕ್ತಿಯಾಗಿದ್ದ ಶ್ರೀಯುತರು ಪ್ರಯಾಣಿಕರ ಜೊತೆ ಎಂದು ಕೆಟ್ಟದಾಗಿ ವರ್ತಿಸಿರುವುದಿಲ್ಲವೆಂಬುವುದೇ ಇವರ ಹೆಗ್ಗಳಿಕೆ. ಅಪಘಾತ ಹೆಚ್ಚಿರುವ ಇಂದಿನ ದಿನಗಳಲ್ಲಿ ಅಪಘಾತರಹಿತವಾಗಿ ವಾಹನ ಓಡಿಸುವುದು ಎಂದರೆ ತನ್ನ ನಿಷ್ಠೆಯ ಮತ್ತು ಏಕಾಗ್ರತೆ ಎತ್ತಿ ತೋರಿಸುತ್ತದೆಯಲ್ಲದೇ, ಅಪಘಾತವಾಗಿ ಅಪಾರ ಹಾನಿ ತಪ್ಪಿಸುವ ಶಕ್ತಿ ಚಾಲಕರ ಕೈಯಲ್ಲಿದೆ. ಈ ಹೊಣೆ ಅರಿತು, ಸಂಚಾರ ನಿಯಮ ಪಾಲಿಸಿ, ಪ್ರಶಸ್ತಿ ಗಿಟ್ಟಿಸಿದ ಶ್ರೀಯುತರನ್ನು ಅಂದಿನ ಪೋಲಿಸ್ ಮಹ ನಿರ್ದೇಶಕರಾದ ಶ್ರೀ ಬಿ. ಎನ್. ಗರುಡಾಚಾರ್ ಪ್ರಶಂಸಿಸಿದ್ದರು.

ಬಲಮುರಿ ಗ್ರಾಮದ ಕಟ್ರತನ ಪೂವಯ್ಯ ಮತ್ತು ಮಾಚವ್ವ ದಂಪತಿಗಳ ನಾಲ್ಕು ಜನ ಮಕ್ಕಳಲ್ಲಿ 2ನೇಯವರಾಗಿ 1933ರಲ್ಲಿ ಜನಿಸಿದರು. ಇವರು ಪಾರಾಣೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, ನಾಪೋಕ್ಲಿನ ಸರಕಾರಿ ಸ್ಕೂಲಿನಲ್ಲಿ ಅಂದಿನ ಸೆಕೆಂಡ್ ಫಾರಂ ಓದಿದ ನಂತರ 1954ರಲ್ಲಿ ಭಾರತೀಯ ಭೂದಳಕ್ಕೆ ಸೇರ್ಪಡೆಯಾದರು. ಇಲ್ಲಿ ಸುಮಾರು 5 ವರ್ಷಗಳ ಸೇವೆ ಸಲ್ಲಿಸಿ ಸ್ವನಿವೃತ್ತಿ ಬಯಸಿದ ನಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯಲ್ಲಿ ಚಾಲಕರಾಗಿ ಸೇರ್ಪಡೆಗೊಂಡರು.



ಕಟ್ರತನ ಮಾದಪ್ಪ

1983ರಲ್ಲಿ ಮುಖ್ಯ ಮಂತ್ರಿಗಳ ಚಿನ್ನದ ಪದಕವಲ್ಲದೆ, 1982 ರಲ್ಲಿ K.S.R.T.C. Staff Driverನ ಬೆಳ್ಳಿಪದಕವು, 1987ರಲ್ಲಿ ಹಿಂದೂಸ್ಥಾನ್ ಫೆರೋಡೊ ಲಿಮಿಟೆಡ್ ಇವರಿಂದ ಬೆಳ್ಳಿ ಪದಕವನ್ನು ಸ್ವೀಕರಿಸಿದ ಏಕೈಕ ಪ್ರಥಮ ಅರೆಭಾಷಿಕಾ ಗೌಡ ವ್ಯಕ್ತಿಯಾಗಿದ್ದಾರೆ. ಈ ಸಂಸ್ಥೆಯಿಂದ 1991ರಲ್ಲಿ ನಿವೃತ್ತಿಯಾಗಿ 10 ಎಕ್ರೆಗಳ ಭೂ ಒಡೆತನದ ಕೃಷಿಕರಾಗಿ, ಮಡಿಕೇರಿ ಸಮೀಪದ ಕಾಟಕೇರಿ ಗ್ರಾಮದ ಉಡೊತ್ತು ಮೊಟ್ಟೆಯಲ್ಲಿ, ತನ್ನ ಧರ್ಮಪತ್ನಿ ಕುಲ್ಲಚನ ಜಾನಕಿಯೊಂದಿಗೆ ತೃಪ್ತಿ ಹಾಗೂ ಸುಖದಿಂದಿರುವ ಇವರಿಗೆ ಇಬ್ಬರು ಗಂಡುಮಕ್ಕಳಲ್ಲಿ ಹಿರಿಯವನಾದ ರಾಮು K.S.R.T.C. ಯಲ್ಲಿ ಅಪ್ಪನ ಹಾದಿಯನ್ನೇ ಹಿಡಿದು ಚಾಲಕನಾಗಿದ್ದಾನೆ.

1962ರ ಚೀನಾ ಆಕ್ರಮಣದ ಸಮಯದಲ್ಲಿ ವಾಪಸ್ಸು ಕರೆಸಿಕೊಂಡ ಭಾರತೀಯ ಭೂದಳದಲ್ಲಿ ಪುನಃ 3ವರ್ಷಗಳ ಸೇವೆಯನ್ನು ಸಲ್ಲಿಸಿ 1965ರಲ್ಲಿ ಮರಳಿಬಂದ ಶಿಸ್ತಿನ ಸಿಪಾಯಿಯಾಗಿದ್ದಾರೆ.

ಲೇಖನ : **ಪಟ್ಟಡ ಎಂ. ಪ್ರಭಾಕರ್**

ಅಧ್ಯಕ್ಷರಾಗಿ ಶಾಂತಕುಮಾರ್ ಆಯ್ಕೆ

ಕುಶಾಲನಗರದ ಎಪಿಸಿಎಂಎಸ್‌ನ ಅಧ್ಯಕ್ಷರಾಗಿ ಎ. ವಿ. ಶಾಂತಕುಮಾರ್ ಅವರು ತೃತೀಯ ಬಾರಿಗೆ ಪುನರಾಯ್ಕೆಗೊಂಡಿದ್ದಾರೆ.

ಸಂಘದ ವಾರ್ಷಿಕ ಮಹಾಸಭೆಯಲ್ಲಿ ಈ ಆಯ್ಕೆ ನಡೆದದ್ದು, ಉಪಾಧ್ಯಕ್ಷರಾಗಿ ಟಿ.ಡಿ. ಮಲ್ಲಪ್ಪ ಅವರು ಆಯ್ಕೆಗೊಂಡಿದ್ದಾರೆ.

[8ನೇ ಪುಟದಿಂದ]

ಶಿರಾಡಿ ಭೂತ

ಕಾಡಿನಲ್ಲಿ ಒಂದು ಕರಿಹುಲಿ ಕಾಣಿಸಿಕೊಂಡು ರೈತರ ಜಾನುವಾರುಗಳನ್ನು ತಿನ್ನತೊಡಗುತ್ತದೆ, ಆ ಊರಿನವರೆಲ್ಲ ಸೇರಿ ಬಲ್ಯಾಯನನ್ನು ಕರೆಸಿ ಕಣಿ ಕೇಳಿಸಿದಾಗ–ಇದು ಶಿರಾಡಿ ಭೂತನ ಆರಾಧನೆಯ ಮೂಲಕ ಸರಿಯಾಗುವುದೆಂದು ಕಂಡು ಬರುತ್ತದೆ.

ಆಧಾರ : ಶಿರಾಡಿ ಪಾಡ್ದನಗಳ ಸಂದರ್ಶನ, ರಾಜ್ಯೋತ್ಸವ ಪ್ರಶಸ್ತಿ ವಿಜೇತ ಶ್ರೀ ಬೋಳಿಯ ಅಜಲ ಮತ್ತು ಶ್ರೀ ಶಂಕರ ಅಜಲ.

ಈ ಮೌನವೇಕೆ?

ಆಕಾಶದಲ್ಲಿ ಹಾರಾಡೊ ಹಕ್ಕಿಯೆ
ನೀನೇಕೆ ಇಂದು ಮೌನದಿ ಕುಳಿತಿರುವೆ
ಎಂದಾಗ ಹಕ್ಕಿಯು ಹೇಳಿತು
ನಾನೇಗೆ ಒಂಟಿಯಾಗಿ ಹಾರಲಿ?
ನನ್ನ ಬಂಧು ಬಳಗವನ್ನು ಕೊಂದು ಬಿಟ್ಟರಲ್ಲಾ! ಎಂದು.

ವಸಂತ ಕಾಲದಲ್ಲಿ ಹಾಡುವ ಕೋಗಿಲೆಯೆ
ನೀನೇಕೆ ಇಂದು ಹಾಡದೆ ಮೌನವಾಗಿರುವೆ!
ಎಂದಾಗ, ಕೋಗಿಲೆಯು ಬೇಸರದಿ ನುಡಿಯಿತು
ನಾನೇಗೆ ಹಾಡಲಿ?
ಮಾವಿನ ಮರ ಚಿಗುರಲಿಲ್ಲ! ಬೇರೆಯ ಮರ ಕರೆಯಲಿಲ್ಲ!!

ಮಳೆಗಾಲದಲ್ಲಿ ನರ್ತಿಸುವ ನವಿಲೆ
ನೀನೇಕೆ ಹೀಗೆ ದುಃಖಿದಿ ಕುಳಿತಿರುವೆ
ಎಂದಾಗ ನವಿಲು ಹೇಳಿತು
ನಾನೇಗೆ ನರ್ತಿಸಲಿ?
ಕಾಲಕ್ಕೆ ಸರಿಯಾಗಿ ಮಳೆಯಿಲ್ಲ
ಜೊತೆಗೆ ನರ್ತಿಸಲು ಗೆಳೆಯ, ಗೆಳತಿಯರಿಲ್ಲ.

ಪಕ್ಷಿಗಳ ಈ ನೋವನ್ನು ಮನಸ್ಸಿಗಚ್ಚಿಕೊಂಡು ಬರುವಾಗ
ದಾರಿಯಲಿ ಮೈನವು ಹೇಳಿತು
ಕೇಳಿದೆಯ ನನ್ನ ಸಹೋದರ ಸಹೋದರಿಯರ ನೋವನ್ನು
ಇನ್ನಾದರೂ ನೆಮ್ಮದಿಯಾಗಿ ಬದುಕಲು
ಬಿಡುವಿರಾ ನಮ್ಮನ್ನು

○ **ರಮಾಮಣಿ ಚಲ್ಲಯ್ಯ**, ಕೆ. ಇ. ಬಿ. ಮಡಿಕೇರಿ

ನಗೆ ಹನಿಗಳು

ನ್ಯಾಯಾಧೀಶ : ಫಿಂಗರ್ ಪ್ರಿಂಟನ್ನು ಆಧರಿಸಿ ಕೊಲೆಗಾರ ನೀನೆ ಎಂದು ನಿರ್ಧರಿಸಿದ್ದೇನೆ.

ಕೊಲೆಗಾರ : ನೋ ನೋ, ಇಂಪಾಸಿಬಲ್ ಕೊಲೆ ಮಾಡುವಾಗ ನಾನು ಕೈಗೆ ಗ್ಲೌಸ್ ಹಾಕಿದ್ದೆ ಸಾರ್.

* * *

ಮೇಷ್ಟ್ರು : ಯಾರು? ಬೋರ್ಡ್ ಮೇಲೆ ಗೀಚಿದ್ದು ಚೋಮು

ಚೋಮು : ನಾನು ಹೇಳೊದಿಲ್ಲ ಸಾರ್, ಹೇಳಿದ್ರೆ ಚರ್ಮ ಸುಲಿತೀನಿ ಅಂತ ರಾಮು ಹೇಳಿದ್ದಾನೆ.

○ **ಪಟ್ಟಡ ವೀಣಾ ಬೋಜಪ್ಪ**, ಅಮ್ಮಂದೂರು.

ಭಿನ್ನ ಭೇದ ವೇತಕೆ

ಹೆಣ್ಣು ಗಂಡು ಎಂದು ಏಕೆ
ಭಿನ್ನ ಭೇದಗೈವಿರಿ?
ಕಣ್ಣಿನೆದುರ ಬಣ್ಣ ಕಳೆದು
ಅಳೆದು ತೂಗಿ ಹೇಳಿರಿ.

ಗಂಡು ಗೈಯ್ಯುವುದೆಲ್ಲವನ್ನ
ಮಾಡಬಲ್ಲ ನಾರಿಯನ್ನ
ಹೀನೆ ಎಂಬುದಾವ ತರ್ಕ
ಯೋಚಿಸೊಮ್ಮೆ ನೋಡಿರಿ.

ಬಳೆಯ ಕೈಯ್ಯೆ ಖಡ್ಗವೆತ್ತಿ
ಖೂಳರೆದೆಗೆ ನಡುಕವಿಟ್ಟು
ಚರಿತೆ ಪುಟವ ತಿಳಿದ ಮೇಲು
ಹೆಣ್ಣು ಅಬಲೆ ಎನ್ನುವುದೆ?

ತಿಳಿದುನೋಡೆ ಸೃಷ್ಟಿಯಲ್ಲಿ
ಹೆಣ್ಣು ಗಂಡು ಪೂರಕ
ಒಂದ ಕೊಂದು ತಾರಕ
ಪ್ರಕೃತಿ ಪುರುಷದ್ಯೋತಕ

○ **ಮೇ. ಮಾ. ವಿಶ್ವನಾಥ**, ಮೂರ್ನಾಡು

ಜ್ಞಾನ ಹನಿಗಳು

* ಆಂಗ್ಲದಲ್ಲಿ ಹೆಚ್ಚು ಬಳಸಲ್ಪಡುವ ಪದವೆಂದರೆ ದಿ [the] ನಂತರದ ಸ್ಥಾನಗಳನ್ನು ಕ್ರಮೇಣ ಬೈ [by], ಆಫ್ [of] ಮತ್ತು ಅಂಡ್ [and] ಪದಗಳು

* ಗ್ರಹಗಳಲ್ಲೇ ಅತೀ ಪ್ರಕಾಶಮಾನವಾದ ಗ್ರಹವೆಂದರೆ 'ಶುಕ್ರ'

* ದಕ್ಷಿಣ ಭಾರತದ ನಾಲ್ಕು ಭಾಷೆಗಳಾದ ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂನಲ್ಲಿ ಒಂದೇ ಹೆಸರಿನಿಂದ ಕರೆಯಲ್ಪಡುವ ಏಕೈಕ ವಸ್ತು ಉಪ್ಪು [salt].

* ಹಾಲಿನಲ್ಲಿರುವ ಅತಿಹೆಚ್ಚಿನ ಸತ್ವವೆಂದರೆ ಕ್ಯಾಲ್ಸಿಯಂ

* 'ಲೋಹಸತ್ವಗಳು' ಹೆಚ್ಚಾಗಿರುವ ಜೀವಸತ್ವವನ್ನು ವಿಟಮಿನ್ ಬಿ-12 ಎಂದು ಕರೆಯುತ್ತಾರೆ.

ಸಂಗ್ರಹ : **ಬೊಮ್ಮೇಗೌಡನ ಚಿಣ್ಣಪ್ಪ ಪುರುಷೋತ್ತಮ**
ಮಡಿಕೇರಿ

ಟೀಕೆ-ಟಿಪ್ಪಣಿ

ಇದೊಂದು ಹೊಸ ಕ್ರಮ ಸರಿಯೇ?

ಕೊಡಗಿನ ತಲಕಾವೇರಿಯಲ್ಲಿ ತಾ॥ 17-10-97ರ ಸಂಜೆ 6-15 ಗಂಟೆಗೆ ತೀರ್ಥೋದ್ಭವ ಸಮಯದಲ್ಲಿ ಗಂಗಾನದಿಯ ಗಂಗಾ ಜಲವನ್ನು ಕೊಡಗಿನ ಒಬ್ಬ ಮಹಾ ನಿಯರು ತೀರ್ಥ ಉದ್ಭವಗಿಂತ ಮೊದಲೇ ಗಂಗಾ ಜಲವನ್ನು ಕುಂಡಿಕೆಗೆ ಸುರಿದರಂತೆ, ಅವರಲ್ಲಿ ನಿಷ ಜಲ ಇತ್ತೋ ಅಥವಾ ವಿಷ ಮಿಶ್ರಿತ ಜಲವಿತ್ತೋ ಅನುಮಾನ. ಇದನ್ನು ಜಲ ತಜ್ಞರು ಪರೀಕ್ಷಿಸಿದ್ದಾರೆಯೇ, ಇದನ್ನು ಕುಂಡಿಕೆಗೆ ಹುಯ್ಯಲು D.C. ಯವರು ಮತ್ತು S. P.ಯವರು ಪರೀಕ್ಷಿಸಿ ಹುಯ್ಯಿಸಿದ್ದಾರೆಯೇ, ಇದೊಂದು ಸರ್ಕಾರದ ಹೊಸ ಕ್ರಮ. ಈ ಭಾರತ ದೇಶದಲ್ಲಿ ನಡೆಯದೇ ಇರುವುದನ್ನು ಹೊಸ ದಾಗಿ ಸೃಷ್ಟಿಸಿದ್ದಾರೆ. ಇದು ಸರಿಯೇ? ತೀರ್ಥ ಅಪವಿತ್ರವಾಗಲಿಲ್ಲವೆ?

ತೀರ್ಥ ಬಂದ ನಂತರ ಮಂತ್ರೋಚ್ಚಾರಣೆ ಆದ ಕೂಡಲೇ ಶ್ರೀ ಕಾವೇರಿ ಮಾತೆಗೆ ಚಿನ್ನಾಭರಣ ತೊಡಿಸುವುದು ಪೂಜೆಯ ಅರ್ಚಕರ ಕೆಲಸ. ಈ ಸಲ ಮಾತೆಗೆ ಚಿನ್ನಾಭರಣ ತೊಡಿಸಿದವರು ಜಿಲ್ಲಾಧಿಕಾರಿಗಳಂತೆ. ಇದು ಒಂದು ಹೊಸ ಸಂಪ್ರದಾಯ. ಶ್ರೀ ಮಾತೆಗೆ ಹೂವಿನ ಹಾರ ಹಾಕಿರುವುದು ಜಿಲ್ಲಾಧಿಕಾರಿಗಳ ತಪ್ಪಲ್ಲ. ಪ್ರತೀ ವರ್ಷವೂ ದೇವಸ್ಥಾನದ ಮುಖ್ಯಸ್ಥರು ಭಗಂಡ ದೇವಸ್ಥಾನದಿಂದ ಭಂಡಾರವನ್ನು ತಲಕಾವೇರಿಗೆ ತೆಗೆದು ಕೊಂಡು ಹೋಗುವ ಪದ್ಧತಿ. ಅದರ ಬದಲಿಗೆ ಸರಕಾರದವರು ಯಾರೋ ಹೊಸಬರಿಂದ ತೆಗೆಸಿಕೊಂಡು ಹೋಗಿದ್ದಾರೆ. ಇದು ಸರಿಯೇ? ಈ ಎಲ್ಲಾ ಪದ್ಧತಿಯ ಬದಲಾವಣೆಗೆ ಮುಖ್ಯಮಂತ್ರಿ ಮಹೋದಯರ ಕೈವಾಡವೆ? ಈ ರೀತಿ ಸರ್ಕಾರ ವರ್ತಿಸಿದರೆ ಮುಂದಿನ ತುಲಾ ಸಂಕ್ರಮಣದ ದಿವಸವೇ ಇದರ ಬಗ್ಗೆ ಅಲ್ಲಿಯ ಭಾಗಮಂಡಲದ ಸ್ಥಳೀಯರಿಂದ ತಡೆ ಮತ್ತು ಸತ್ಯಾಗ್ರಹ ನಡೆದೀತು? ತಲಕಾವೇರಿಯಲ್ಲಿ ಅನ್ನ ಛತ್ರ ರಿಪೇರಿ ಮಾಡಿಸಲು ತಮಿಳುನಾಡಿನ ಶ್ರೀ ಕಾವೇರಿ ಭಕ್ತರು ಮುಂದೆ ಬಂದಾಗ ಅವರನ್ನು ತಿರಸ್ಕರಿಸಿ ಸರ್ಕಾರವೇ ರಿಪೇರಿ ಮಾಡಿಸಿ, ಸರ್ಕಾರದ ಲೆಕ್ಕದಲ್ಲಿ ಕೊಳ್ಳೆ ಹೊಡೆದಿರುವುದು ಸರಿಯೇ?

ಉಸ್ತುವಾರಿ ಸಚಿವರು ಮತ್ತು ಜಿಲ್ಲಾಧಿಕಾರಿಗಳು ಇವರ ಜೊತೆಯಲ್ಲಿ ಎಸ್. ಪಿ. ಅಧಿಕಾರಿಗಳು ಸಹ ಸೇರಿ ಮಾಡಿರುವ ತಪ್ಪುಗಳೆಂದೇ ಕಾಣುತ್ತಿದೆ. ಇನ್ನು ಮುಂದಾದರೂ ಈ ಹಿಂದೆ ನಡೆದುಕೊಂಡು ಬರುತ್ತಿದ್ದ ಪದ್ಧತಿಯನ್ನು ಅನುಸರಿಸಿಕೊಂಡು ಬನ್ನಿ. ಯಾರಿಗೂ ತೊಂದರೆಯಾಗದಂತೆ ಶ್ರೀ ಕಾವೇರಿಮಾತೆ ಕಾಪಾಡಲಿ ಎಂದು ಹಾರೈಸುವ.

○ **ಕುದುಕುಳಿ ಟಿ. ಸುಬ್ಬಯ್ಯ,**
ಕುಶಾಲನಗರ.

(10ನೇ ಪುಟದಿಂದ)

ಮಲೆ ತಮ್ಮಚ್ಚ ಮೃತ್ಯುವಿನಿಂದ ಕಾಪಾಡ್ದ

ಗಳ ಆಳತೆಯಿಂದ ಮರದ ತುಂಡಿನ ಅಡಿ ಕೋಲು ಮಾಡಿ ಅದರ ಉದ್ದವನ್ನು ಅಳೆದೆವು 14 ½ ಅಡಿ ಉದ್ದವಿತ್ತು. ಮಧ್ಯ ಭಾಗದಲ್ಲಿ ದೇಹದ ಸುತ್ತಳತೆ 12 ಇಂಚು ಇತ್ತು. ಅದೊಂದು ಪೂರ್ಣ ಬೆಳೆದ ಕಾಳಿಂಗಸರ್ಪ. ಒಂದು ಅಪೂರ್ವ ಪ್ರಕೃತಿ ಸಂಪತ್ತನ್ನು ನಾಶಮಾಡಿದ ಪಾಪಪ್ರಜ್ಞೆ ನನ್ನಲ್ಲಿ ಮೂಡಿ ತುಂಬ ಖಿನ್ನನಾದೆ. ಅದರ ಅಂತ್ಯಕ್ರಿಯೆಗೆ ಏರ್ಪಾಡು ಮಾಡುವಂತೆ ಕೆಲಸದವರಿಗೆ ಆದೇಶವಿತ್ತೆ.

ಎಲ್ಲರೂ ಸೇರಿ ಅದರ ದೇಹವನ್ನು ಬಡಿಗೆಗಳ ಸಹಾಯದಿಂದ ಸುರುಳಿ ಸುತ್ತಿದರು. ಅದರ ಮೇಲೆ ಧಾರಾಳವಾಗಿ ಒಣ ಕಟ್ಟಿಗೆಯನ್ನು ತಂದು ರಾಶಿ ಹಾಕಿದರು. ನಾನು ಬೆಂಕಿ ಕೊಟ್ಟೆ. ಅದು ಸಂಪೂರ್ಣವಾಗಿ ಸುಟ್ಟು ಬೂದಿಯಾಗುವವರೆಗೂ ನಿಂತಿದ್ದೆವು. ಬೂದಿಯನ್ನು ಒಂದು ಹೊಂಡಕ್ಕೆ ಹಾಕಿ ಮಣ್ಣು ಮುಚ್ಚಿ ಬಿಡಾರಕ್ಕೆ ಹೊರೆಟೆವು. "ಮಕ್ಕಳೇ ಯಾರಿಗೂ ಇಂತಹ ಅನುಭವ ಬೇಡ" ಎಂದು ತಂದೆಯವರು ಕುಳಿತಲ್ಲಿಂದ ಎದ್ದು ನೇರವಾಗಿ ದೇವರ ಕೋಣೆಗೆ ನಡೆದುಬಿಟ್ಟರು. ○

[ಸತ್ಯ ಘಟನೆಯ ಒಂದು ನೆನಪು]

ನುಡಿ ಮುತ್ತು

ಹೆಂಗಸು ಎಂದರೆ ಈರುಳ್ಳಿ ಹಾಗೆ
ನೋಡಲು ಚೆಂದ, ಪದರು ಬಿಡಿಸುತ್ತಾ
ಹೋದಂತೆ ಕಣ್ಣಲ್ಲಿ ನೀರು ಬರುತ್ತದೆ.

—**ಬೀಚಿ**

ಜನ್ಮಾಯುಷ್ಯಾ

ಕಡಲಿನಿಂದ ತೇಲಿ ಬರುವ ಅಲೆಗಳು
ನನ್ನ ಕೈ ಬೀಸಿ ಕರೆಯುತಿವೆ
ಬಾ...ಬಾ...ಬಾನನ್ನ ಸೇರೆಂದು
ದೇವನಿತ್ತ ಏಳು ಜನ್ಮದಲಿ
ಆದಿ ಆರು ಜನ್ಮ ಮುಗಿದು
ಇದೇ ನಿನ್ನ ಕೊನೆ ಜನ್ಮ ಬಾ ಎಂದು.

ಕಡಲಿನಂಚಿಗೆ ನೋಡಿದಾಗ
ಕೈ ಬೀಸಿ ಕರೆಯುವವ ನುಡಿದನು
ಬಾ ಎಂದು ಕರೆಯುತಲಿ ಮಾತನೊಂದು
ಏಳು ಜನ್ಮದ ಆಯುಷ್ಯ ಮುಗಿದಿದೆ
ಆ ಜನ್ಮಗಳ ಪಾಪವನು ಸಮುದ್ರದ
ಅಲೆಗಳ ದಾಟುತಲಿ ತೊಳೆಯುತ
ಬಾ ಎಂದು.

○ **ಚಂಡೀರ ರಮ್ಯ ಪೂಣಚ್ಚ**
ವಿರಾಜಪೇಟೆ.

ನಿಮ್ಮ ಪತ್ರಗಳು

ದಿ|| ಕೊ. ಸ. ಕಾರ್ಯಪ್ಪನವರನ್ನು ಕುರಿತು

ಮಾನ್ಯರೇ,

ನಿಮ್ಮ ಪತ್ರಿಕೆಯಲ್ಲಿ ದಿನಂಗತ ಕೊ. ಸ. ಕಾರ್ಯಪ್ಪನವರು ಸಂಗ್ರಹ ಮಾಡಿದ ಲೇಖನ ಪ್ರಕಟಿಸಿದ್ದಿರಿ. ಅದರಲ್ಲಿ ಒಂದು ಮುಖ್ಯ ವಿಷಯ ಎಂದರೆ ಬ್ರಿಟೀಷರ ಆಡಳಿತದಲ್ಲಿ, ಸ್ವಾತಂತ್ರ ಸಂಗ್ರಾಮದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದ ಧೀರ, ಧೀಮಂತ ತ್ಯಾಗಮಯಿ, ಗುಡ್ಡೆಮನೆ ಅಪ್ಪಯ್ಯಗೌಡರ ಉಲ್ಲೇಖ. ಈ ಬಗ್ಗೆ ದಿ|| ಕೊ. ಸ. ಕಾರ್ಯಪ್ಪನವರು ಮುತುವರ್ಜಿ ವಹಿಸಿ ಅವರ ಜ್ಞಾಪಕಾರ್ಥ ಒಂದು ಸ್ಮಾರಕವನ್ನು ಮಡಿಕೇರಿ ನಗರದಲ್ಲಿ ಸ್ಥಾಪಿಸಲು ತುಂಬಾ ಶ್ರಮಪಟ್ಟು ಒಂದು ಶಿಲೆಯನ್ನು ಸರಕಾರಿ ಪದವಿ ಪೂರ್ವ ಕಾಲೇಜು, ಮಡಿಕೇರಿ ಇದರ ಮುಖ್ಯ ದ್ವಾರದ ಹತ್ತಿರ, ಅಂದರೆ ಗೌಡ ಸಮಾಜಕ್ಕೆ ಹೋಗುವ ರಸ್ತೆಯಲ್ಲಿ ನಿರ್ಮಿಸಲು ಹೋರಾಡಿ ನಿರ್ಮಿಸಿದ್ದಾರೆ. ಇದು ದಿ|| ಕೊ. ಸ. ಕಾರ್ಯಪ್ಪನವರ ಸ್ವಪ್ರಯತ್ನ ಹಾಗು ಜಿಲ್ಲಾಡಳಿತ, ಪುರಸಭೆ ಹಾಗೂ ಹಲವಾರು ನಮ್ಮ ಗಣ್ಯರ ಸಹಕಾರದ ಕುರುಹು ಆಗಿ ಉಳಿದಿದೆ. ಆದರೆ ಈ ಶಿಲೆಯನ್ನು ಪೂರ್ಣ ಮರೆತು "ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ" ಅನ್ನುವ ಬದಲು ಆಂಗ್ಲೆಯನೊಬ್ಬನ ಹೆಸರು ಹಿಡಿದು ಮ್ಯಾನ್ಸ್ ಕಾಂಪೌಂಡ್ ರಸ್ತೆ ಎಂದೇ ಕರೆಯುತ್ತಾರೆ. ಈ ಶಿಲೆ ಸುಣ್ಣ, ಬಣ್ಣ ಕಾಣದೆ ಅಕ್ಷರಗಳು ನಶಿಸಿ ಕಾಡು, ಕಸ ಬೆಳೆದು, ಅಪರಿಚಿತರು ಇದೇನು ಶಿಲೆ ಎಂದು ಮಾತಾಡಿಕೊಂಡಿದ್ದು ಕೇಳಲಾಗಿದೆ.

ಈ ಬಗ್ಗೆ ಪುರಸಭೆಯವರಾಗಲಿ, ಜಿಲ್ಲಾ ಆಡಳಿತ ಆಗಲಿ, ನಮ್ಮ ಗೌಡ ಸಮಾಜದವರುಸಹ ಗಮನಹರಿಸಿದಂತಿಲ್ಲ. ಮಡಿಕೇರಿಯಲ್ಲಿ ಹಲವಾರು ರಸ್ತೆಗಳಿಗೆ ಕೊಡಗಿನ ಮಹಾನ್ ವ್ಯಕ್ತಿಗಳ ಹೆಸರನ್ನು ಇಟ್ಟು ನಿತ್ಯದ ವ್ಯವಹಾರದಲ್ಲಿ ಸ್ಮರಿಸಿಕೊಳ್ಳಲಾಗುತ್ತಿದೆ. ಅಂತೆಯೇ ಈ ಗುಡ್ಡೆಮನೆ ಅಪ್ಪಯ್ಯಗೌಡರ ಈ ಶಿಲಾಸ್ಮಾರಕವನ್ನು ಜನರು ಪ್ರತ್ಯಕ್ಷವಾಗಿ ಗುರ್ತಿಸಲು, ಬಹಿರಂಗವಾಗಿ ಜನತೆ ತಿಳಿಯಲು, ನಿಮ್ಮ ಪತ್ರಿಕೆಯು ನಮ್ಮ ಜನಾಂಗದ ಹಿರಿಯ ಮುತ್ಸದ್ಧಿಗಳು, ಯುವ ಮುಂದಾಳುಗಳು, ನಮ್ಮ ಗೌಡ ಸಮಾಜದ ಪದಾಧಿಕಾರಿಗಳು ಮುಂದಾಗಲು ಸಹಕಾರಿಯಾಗಲೆಂದು ಕಳಕಳಿಯ ಕೋರಿಕೆ.

○ ಚಂಡೀರ ಚಿಣ್ಣಪ್ಪ, ಮಡಿಕೇರಿ

ನಮ್ಮ ಉಡುಪನ್ನೇ ಅನುಸರಿಸಿ

ಮಾನ್ಯರೇ,

ಕೊಡಗು ಗೌಡ ಜನಾಂಗದ ಆಚಾರ–ವಿಚಾರ ಬಗ್ಗೆ ತುಂಬ ಕಾಳಜಿ ವಹಿಸಿ ಶ್ರಮಿಸುತ್ತಿದ್ದಿರಾ. ಹಾಗೆ ನಿಮ್ಮಲ್ಲಿ ದಯವಿಟ್ಟು ಕೊಡಗು ಜನಾಂಗದ ಹೆಂಗಸರ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಅದು ಏನೆಂದರೆ ಕೊಡಗು ಗೌಡ ಜನಾಂಗದ ಹೆಂಗಸರು ಉಡುವ ಸೀರೆ ಬಗ್ಗೆ. ಹಳೇ ಕಾಲದಲ್ಲಿ ಹೆಂಗಸರು ಗೇಂಟೆ ಕಟ್ಟಿ ಸೀರೆ ಉಡುತ್ತಿದ್ದರು. ಅದೇ ಕ್ರಮವನ್ನು ಈವಾಗಲೂ ಎಲ್ಲಾ ದಿನಗಳಲ್ಲಿ ಅಲ್ಲ, ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುವಾಗ ಕ್ರಮಬದ್ಧವಾಗಿ ಅದೇ ರೀತಿ ಉಡುವ ಕ್ರಮ ಜಾರಿಗೆ ಬರಲಿ. ಕಾಲ ಕ್ರಮೇಣ ನಮ್ಮ ಜನಾಂಗದ ಈ ಸೀರೆ ಅಳಿದು ಹೋಗಬಹುದು. ಅದು ಅಲ್ಲದೇ ಈಗ ಈ ಪದ್ಧತಿ ಹುಡುಕಿದರೆ 100ಕ್ಕೆ 25 ರಷ್ಟು ಮಾತ್ರ ಉಳಿದಿದೆ. ಅದೇ ಕೊಡವ ಜನಾಂಗದ ಹುಡುಗಿಯರು ಮದುವೆ ಮನೆಗೆ, ಗೃಹ ಪ್ರವೇಶ, ದೇವಸ್ಥಾನಕ್ಕೆ ಹೋಗುವಾಗ ಅವರ ಹಿಂದೆ ನೆರಿಗೆ ಸೀರೆ ಉಟ್ಟೇ ಉಡುತ್ತಾರೆ. ಅದೇ ರೀತಿ ನಮ್ಮ ಜನಾಂಗದಲ್ಲಿ ಬರಲಿ. ಡಿಸೆಂಬರ್‌ನಲ್ಲಿ ಬರುವ ಹುತ್ತರಿ ಹಬ್ಬಕ್ಕೆ ಎಲ್ಲರೂ ಗೇಂಟೆ ಮಾಡಿ ಕದಿರು ತೆಗೆಯಲು ಮೈಸೂರಿನ ಗೌಡ ಸಮಾಜಕ್ಕೆ ಬರಲಿ ಎಂದು ಆಶಿಸುವ.

○ ಕುಸುಮ, ಮೈಸೂರು.

ಅಧಿಕ ಪ್ರಸಾರದ "ಸಂಗಾತಿ"

ಮಾನ್ಯರೇ,

ಈಗಾಗಲೆ "ಕೊಡಗು ಸಂಗಾತಿ" ಕೊಡಗು, ಮೈಸೂರು, ಬೆಂಗಳೂರು, ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಜನಾಂಗದ ಮನೆ ಮನೆಗಳಲ್ಲಿ ರಾರಾಜಿಸುತ್ತಿದೆ. ಎಂದು ತಿಳಿಸಲು ಹೆಮ್ಮೆ ಎನಿಸುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಮೂಲತಃ ಗೌಡರು ಮುಖ್ಯ ನಿವಾಸಿಗಳಾಗಿದ್ದು ಚರಿತ್ರೆಯಲ್ಲಿ, ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯದಲ್ಲಿ ಸಹ ಉನ್ನತ ಮಟ್ಟದಲ್ಲಿದ್ದಾರೆ.

○ ಚಂಡೀರ ಚಿಣ್ಣಪ್ಪ, ಮಡಿಕೇರಿ.

ವಂಚಿಸಬೇಡಿ

ಮಾನ್ಯರೇ,

ನೀವು ನನ್ನ ಒಪ್ಪಿಗೆ ಇಲ್ಲದೆ ಕೊಡಗು ಸಂಗಾತಿ ಪತ್ರಿಕೆಯನ್ನು ಕಳಿಸಿರುತ್ತೀರಿ ಇದು ನಿಮ್ಮ ದೊಡ್ಡ ತಪ್ಪು. ಇನ್ನು ಮುಂದೆ ನನಗೆ ನಿಮ್ಮ ಪತ್ರಿಕೆಯನ್ನು ಕಳಿಸಬೇಡಿ.

ಇಂತಹ ಸಾವಿರಾರು ಪತ್ರಿಕೆಗಳು ಇರುತ್ತದೆ. ಇದಕ್ಕೆ ಹಣ ಕೊಡುವುದೇ ಕೆಲಸವಲ್ಲ. ಇನ್ನು ಮುಂದೆ ಹೀಗೆ ಪತ್ರಿಕೆ ಕಳಿಸಿ ವಂಚಿಸಬೇಡಿ.

○ ಡಿ. ಸಿ. ರವಿ, ಸುಳ್ಯ.

ಅಯ್ಯೋ ಅಕ್ಕಾ, ಕೂಸು ಬಸ್‌ಲೇ....

ಅರೆ ಭಾಷಿಕ ವಿಭಾಗ

ಬಿ. ಆರ್. ಜೋಯಪ್ಪ, ಮಡಿ

ಹಳ್ಳೀಲಿರವು ಒಮ್ಮೊಮ್ಮೆ ನಗರಲಿರೋ ನೆಂಟ್ರ ಮನೆಗೆ ಹೋದರೆ ಬಾರೀ ಪಾಡ್ ಬಾಕಾದೆ. ಎಲ್ಲಿ ಕೂರಕೋ ಅಲ್ಲೇ ಕೂರಕು. ಕುಡೆಕನ ಗಟಗಟಾಂತ ಕುಡೆಂಗಿಲ್ಲೆ. ತಿಂಬಕನ ಗಬಗಬಾಂತ ತಿಂಬಂಗಿಲ್ಲೆ. ಬಟ್ಟೆಗಿಟ್ಟೆ ಮಣ್ ಮಸಿ ಆಗಂಗಿಲ್ಲೆ. ಬೀಡಿಗೀಡಿ ಸೇದಿ ಗೋಡೆಗೆ ಒತ್ತಿಕೆ ಬತ್. ಅಡಿಕೆನ ಕುರ್ಚಿ ಕೈ ಮೇಲೆ ಮಡಿಗಿ ಚೂರು ಮಾಡಿಕೆ ಬತ್. ಎಲೆಡಿಕೆ ತಿಂಬಕನ ಹೆಚ್ಚಾದ ಸುಣ್ಣನ ಕುರ್ಚಿ ಕಾಲಿಗೆ ಉಜ್ಜಿಕೆ ಬತ್.

ನಗರದವು ಮನೆ ಸೇರುದೋ ರಾತ್ರಿ 8–9 ಗಂಟೆಗೆ. ಅಡಿಗೆ ಮಾಡುದು 10 ಗಂಟೆ ರಾತ್ರೆಲಿ. ಉಂಬೊದು 11ಗಂಟೆಗೆ. ಇವುಕೆ ಬೆಳಗಾದು ಬೆಳಿಗ್ಗೆ 8 ಗಂಟೆಗೆ ! ಅದೆಲ್ಲ ಇರಲಿ, ನಮ್ಮ ಕೇಪಣ್ಣ ಮೊನ್ನೆ ಬೆಂಗ್ಳೂರಿಗೆ ಹೋಗಿತ್. ಭಾವನ ಮನೆಗೆ ಹೋಗದೆ ತುಂಬಾ ವರ್ಷ ಬೇರೆ ಆಗಿತ್ ಅಪರೂಪಕ್ಕೆ ಭಾ ವ ಬಂದದ್‌ಂತೇಳಿ ಡೋಸ್‌ಗೀಸೆಲ್ಲಾ ಜೋರಾಗಿತ್. ಉಂಬಕೆ ಕೂರಕನ ಒಮ್ಮೆ ದೊಡ್ಡ ಜೀವ ಹೋದಂಗೆ ಕರೆಂಟ್ ಹೋತು. ಅಂತೂ ಇಂತು ಇವು ಡೋಸ್ ಏರ್‌ಸ್ತಾ ಇದ್ದಂಗೆ ಸೊಳ್ಳೆಗ ರಕ್ತ ಹೀರ್ತಾ ಇದ್ದೊ. ನಮ್ಮ ಕೇಪಣ್ಣಂಗೆ ಆ ಸೊಳ್ಳೆಗೆಲ್ಲಾ ಕೇರೇ ಇಲ್ಲೆ. [ಡೋಸ್ ಇದ್ದದ್‌ಕೆ] ಸರಿ, ಊಟೆಲ್ಲಾ ಆತ್. ಸುಮಾರೊತ್ತು ಲೊಟ್ಟೆ ಬುಟ್ ಕಂಡಿದ್ದೋ. ಕೇಪಣ್ಣ ಜೂಂಗಿಕೆ ಶುರ್ ಮಾಡ್ತ್. ಅಷ್ಟೊತ್ತಿಗೆ "ಡ್ಯಾಡೀ ಬೆಡ್ ರೆಡಿಂತ" ಧ್ವನಿ ಬಾತ್. ಕೇಪಣ್ಣನ ದಿಬ್ಬಣದವರ್ನ ಕರ್ಕಂಡ್ ಹೋಗುವಂಗೆ ಕೈಹಿಡ್ದ್ ನಡ್ಸಿಕಂಡೋದೊ. ಸೊಳ್ಳೆ ಪರದೆ ಒಳಗೆ ಮಲ್ಗಿಸಿದ್ದೊ.

ಹಿಂಗೆ ಕೇಪಣ್ಣ ಪರದೆ ಒಳಗೆ ಮಲಗಿ ಗೊರಕೆ ಹೊಡಿತಾ ಇರಕನ ಏನಾತ್ ? ಹೊರಗೆ ಬೀದಿ ನಾಯಿಗ ಬೊಗಳಿಕೆ ಶುರ್ ಮಾಡ್ದೊ. ಕೇಪಣ್ಣಂಗೆ ಎಚ್ಚರಾತ್. ಓಹೋ ಕಾಡ್ಹಂದಿಗಳೋ, ಆನೆಯೋ ಗದ್ದೆಗೆ ಬಂದ್ ಬುಟ್ಟೊ ಕಂಡದೆತ ಗ್ಯಾನ ಮಾಡ್ದ ಕೇಪಣ್ಣ "ಅದ್ಪ ಅದ್ದ ಚೂಚೂ ಹಿಡಿ ಹಿಡಿಂತ" ಬೊಬ್ಬೆ ಹಾಕಿತ್. ಈ ಬೊಬ್ಬೆಗೆ ಭಾವನ ಮನೆಯುವೆಲ್ಲಾ ಗಾಬರೀಲಿ ಎದ್ದೋ. ಹಕ್ಕಲೆ ಇದ್ದ ಮನೆಯುವುಕೆನೂ ಈ ಬೊಬ್ಬೆ ಕೇಳಿ ಕಳ್ಳ ಕಳ್ಳಂತ ಹೇಳಿಕಂಡ್ ಪೊಲೀಸಿಗೆ ಫೋನ್ ಮಾಡಿಕೆ ಪೇಚಾಡ್ತಾ ಒಳೊ. ಕೇಪಣ್ಣ ಎದ್ ಕುದ್ಕಂಡತ್. ಹಾಸಿಗೆಂದ ಇಳೆಕೆ ಬತ್. ಹಾಳಾದ ಪರದೆ ಬೇರೆ ಉಟ್ಟು. ಇದೆಲ್ಲಾ ಯಂಥದ್, ನಾ ಎಲ್ಲಿ ಒಳೆಂತ ಗ್ಯಾನ ಮಾಡಿಕಂಡಿರ್‌ಕನ ಮನೆಯುವೆಲ್ಲಾ ಬಂದ್ ನೀವ್‌ಗೆ ಏನಾತ್ ತ ಕೇಳಕನೇ ಗೊತ್ತು. ಕೇಪಣ್ಣಂಗೆ ಗೊತ್ತಾತ್. ನಾ ಗದ್ದೆಲಿ ಹಂದಿ ಪಾರಕ್ಕೆ ಮಲಿಗಿದ್ ತ ಗ್ಯಾನ ಮಾಡಿಬುಟ್ಟೆ ಭಾವಾಂತ ಹೇಳ್‌ಕನ ಮನೆಯುವೆಲ್ಲಾ ಬಿದ್ ಬಿದ್ ನಗಾಡಿಕೆ ಶುರುಮಾಡ್ದೊ. ಇದೇ ರೀತಿಯ ಅನುಭವ ನೀವ್‌ಗೂ ಆಗುಟಾ? ಈಗಂತೂ ಕೇಪಣ್ಣ ಎಲ್ಲೇ ಮಲಗಲಿ ಮೂರ್ ಮೂರ್ ಸತಿ ತಾನೆಲ್ಲಿರುವುತ ಗ್ಯಾನ ಮಾಡಿಕಂಡೇ ಮಲಗುದು ಗಡ !

ಈ ಗಂಡ್ ಜನಗಳೇ ಹಿಂಗೆಂತ ಹೆಣ್ ಜನ ನಗಾಡ್‌ವೋ. ಒಮ್ಮೆ ಜೂಬಿ ಏನ್ ಮಾಡ್ತ್ ತ ಗೊತ್ತುಟಾ ? ನೆಂಟ್ರ ಮನೆಗೆ ಹೊರ್ಟತ್. ಜೊತೆಗೆ ಕೂಸುನ ಸೊಂಟಲಿ ತೆತ್ತಿಕಂಡತ್. ಮಡಿಕೇರಿಲಿ ಕುರಿ, ಮಾಸ, ಗೋಧಿರೊಟ್ಟೆ ತಕ್ಕಂಡತ್. ಅಪರೂಪಕ್ಕೆ ಹೋದಲ್ಲಾಂತ ಸೊಲ್ಪ ಗೌಜಿಲಿ ಹೊರ್ಟತ್. ಭಾಗಮಂಡಲ ಕಡೆಗೆ ಹೋಗುವ ಬಸ್ ಬಾತ್. ಬಸ್ ರಶ್ ಇತ್. ಬಸ್ ಹತ್ತಿಕಾಕನ ಯಾರೋ ಪುಣ್ಯಾತ್ಮರ್ ಕೂಸ್‌ನ ಕರ್ಕಂಡೋ. ಇವುಳು ಒಂದ್‌ಕಡೆ ಬ್ಯಾಗ್‌ನ ಕೋಸಿ ಕಂಡ್ ನಿತ್‌ಕಂಡತ್. ಇಳಿವ ಜಾಗ ಬಾತ್. ಬೇಗ ಬೇಗ ಬಸ್‌ಂದ ಇಳ್ತ್. ಬ್ಯಾಗ್ ತಕ್ಕಂಡ್ ಸೀದ ಹೋತು.

ನಂಟ್ರ ಮನೇಲಿ ಎಲ್ಲವೂ ಇದ್ದವೆಯೋ ಇಲ್ಲೆಯೋ. ಯಾರ್ಯಾರ್ ಹೆಂಗೆಲ್ಲಾ ಮಾತಾಡುವೋ? ನಾ ಬಂದೆಂತೇಳಿ ಕೋಳಿ ಕೊಂದವೆಯೋ ಇಲ್ಲೆ ಒಂದ್ ಮೊಟ್ಟೆನ ಹೊಡ್ದ್ ಹಾಕಿ ಧೋಳಾಂಬರ ಮಾಡಿ "ಮೊಟ್ಟೆ ಗೈಪುತ" ಇಕ್ಕುವೆಯೋಂತೆಲ್ಲಾ ಗ್ಯಾನ ಮಾಡಿಕಂಡ್ ಹೋತಿತ್. ಅಷ್ಟೊತ್ತಿಗೆ ಅತ್ತಂದ ಯಾರೋ ಬಂದವು "ಓ ಏನಕ್ಕಾ? ಬಾಳ ವರ್ಷ ಆತಲ್ಲ ನಿಮ್ಮನ್ನ ನೋಡದೆ. ಸೌಖ್ಯನಾ ? ಕೂಸ್ನ ಯಾರಕ್ಕಲೆ ಬುಟ್ ಬಂದರಿ ?" ಹಿಂಗೆ ಕೇಳಕನೇ ಜೂಬಿಗೆ ತನ್ನ ಕೂಸ್ನ ಬಸ್‌ಲೇ ಬುಟ್ ಬುಟ್ಟೊಳೇಂತ" ಹೇಳಿ ಕಂಡ್ ಹಿಂದಕ್ಕೆ ಓಡಿಕೆ ಶುರ್ ಮಾಡ್ತ್. ಹೆಂಗೋ ಅಂತೂ ಅ ಗಂಡ್ ಕೂಸು ಇವುಳ ಕೈಗೆ ಸಿಕ್ಕಿತ್.

ಈ ಪ್ರಸಂಗ ನಡ್‌ದ್ ಬಾಳ ವರ್ಷ ಆತ್. ಈಗ ಆ ಕೂಸು "ಕೂಸ್ನಪ್ಪ" ಆಗಿ ಸುಖಾಲಿ ಉಟ್ಟು.

ಆ ಕೂಸ್ನಪ್ಪಂಗೆ ಜೈ.

—0—

ಅಪ್ಪ ಅವ್ವನ ಮುದ್ದು ಮುಂಜ

ಒಂದು ಊರ್ಲಿ ಒಂದ್ ಗಂಡ ಹೆಣ್ಣ್ ಇದ್ದೊ. ಅವ್ಕೆ ಒಬ್ಬನೇ ಒಬ್ಬ ಮುಂಜ. ಒಬ್ಬನೇ ಮುಂಜತ ಭಾರೀ ಮುಂಜಣೇಲಿ ಸಾಕಿದೊ. ಹೆಣ್ಣಾದರೂ ಇವನೇ, ಗಂಡಾದರೂ ಇವನೇ ತೇಂಳಿ ಬಾರಿ ಮುದ್ದು ಮಾಡಿ ಸಾಕಿದೊ. ಅದ್ಕೆ ಪ್ರತಿ ಫಲವಾಗಿ ಮುಂಜ ಭಾರೀ ಪುಡಾರಿಯಾಗಿ ಬೆಳ್ತ್. ಅಪ್ಪನು ಅವ್ವನು ಅಂವ ಕೇಳ್ದಂಗೆ ದುಡ್ಡ್ ಕೊಡುತ್ತಿದ್ದೊ, ಅಂವ ಕೇಳ್ದ್ ವಸ್ತ್ನ ತಂದ್ ಕೊಡ್ತಿದ್ದೊ. ಹೀಂಗಾಗಿ ಮುಂಜ ಬೀಡಿ ಸಿಗರೇಟ್ ಸೇದುದು, ಸರಾಯಿ ಕುಡಿಯೋದು, ಗೂಸೆಗಳ ಹಿಂದೆ ಸುತ್ತುದು

ಮುಂಞ್ಞಾಂಡ್ರ ರಮೇಶ್, ಮೈಸೂರು

ಎಲ್ಲಾ ಸುರಾತ್. ಕಲ್ತ ಅರೆ ಬರೆ ವಿದ್ಯೆ ಕಾಡ್ ಹತ್ತಿತ್. ಅವ್ವನೂ ಅಪ್ಪನೂ, ನನ್ನ ಮುಂಜನ ಡಾಕ್ಟ್ರ, ಇಂಜಿನಿಯರ್ ಮಾಡೋಕು ತೇಂಳಿ ಬಾರೀ ಆಸೆಲಿ ಇದ್ದೊ. ಅವರ ಗ್ಯಾನ ಮುಂಜ ಕಾಲೇಜಿಗೆ ಹೋಗ್ತಾ ಉಟ್ಟ್. ಚೆನ್ನಾಗಿ ಓದ್ತಾ ಉಟ್ಟ್. ಇಂವ ಲಾಯ್ಕ್ಲಿ ಓದಿ ಒಂದು ಪದವಿ ಪಡ್ದರೆ ಸಾಕ್ಂತ ಗ್ಯಾನ. ಆದರೆ ಮುಂಜ ಓದಿದೇ ಬ್ಯಾರೆ. ಮಾಡ್ದ್ ಬ್ಯಾರೆ. ಈ ವಿಷ್ಯ ಅವ್ವ ಅಪ್ಪಂಗೆ ಗೊತ್ಲೆ. ಮುಂಜ ಮನೇಲಿ ಮಾತ್ರ ಕೊತ್ತಿನಂಗೆ ಇತ್ತಿತ್. ಹೊರಗೆ ಬಂದ್ರೆ ಇವನೇ ಹುಲಿ. ಪರೀಕ್ಷೆ ಹತ್ರ ಬಾತ್. ಮುಂಜ ಚೆನ್ನಾಗಿ ಓದುದು ನೋಡಿ ಅವ್ವಂಗೆ ಅಪ್ಪಂಗೆ ನನ್ನ ಮುಂಜ ಗ್ಯಾರಂಟಿ ರ‍್ಯಾಂಕ್ ಬಂವದೆ ತ ಬಾರಿ ಖುಷಿ. ಆದರೆ ಪರೀಕ್ಷೆ ಮುಗ್ದ್ ಫಲಿತಾಂಶ ಬಾಕನೇ ಗೊತ್ತ್ತ ನನ್ನ ಮುಂಜ ಸೊಂಟ ಇಲ್ಲದ ಎಂಟ್, ಬಾಲ ಇಲ್ಲದ ಒಂಭತ್ ತಗಂಡುಟ್ಟತ. [ಅಂದ್ರೆ ಸೊನ್ನೆ].

ಈಗ ಮುಂಜನ ವಿಶ್ಯ ಅವ್ವಂಗೆ ಅಪ್ಪಂಗೆ ಗೊತ್ತಾತ್. ನಾವು ಇವನ ಸುಮ್ನೆ ಬಿಟ್ರೆ ಆತ್ಲೆ. ಇವಂಗೆ ಬೇಗ ಮದ್ವೆ ಮಾಡಕು. ಇಲ್ಲೆಂತಾದ್ರೆ ಇಂವ ನಮ್ಮ ಮಾನ ಮರ್ಯಾದೆ ತೀಶಾ ಹರಾಜಿ ಹಾಕಿದೆ ತೇಂಳಿ ಹೆಣ್ಣ್ ನೋಡ್ಕಿಕೆ ಸುರು ಮಾಡ್ದೊ. ಅವರ ಪರಿಚಯಸ್ತರಿಗೆಲ್ಲ ಹೇಳ್ದೊ. ಆಗ ಯಾರೋಬ್ಬ ಒಂದು ಗೂಡೆ ಉಟ್ಟ್. ಅವಳು ಡಾಕ್ಟ್ರ ತೇಳ್ತ್. ಸೊಸೆ ಆಗೋಳು ಡಾಕ್ಟ್ರ ತೇಳ್ಕನ ಅಪ್ಪನ ಅವ್ವನ ಕಿವಿ ನೆಟ್ಟಂಗಾತ್. ಮುಂಜನ ಹತ್ರ ಈ ವಿಷ್ಯ ಎಲ್ಲಾ ಹೇಳ್ದೊ. ಮುಂಜ ನಂಗೆ ಆ ಗೂಡೆ ಬ್ಯಾಡ ತೇಳ್ತ್. ಸರಿ, ಅಂದ್ರೆ ತೇಳಿ ಪುನಃ ಬ್ಯಾರೆ ಗೂಡೆ ನೋಡ್ದೊ. ಅವಳು ಟೈಫಿಸ್ಟ. ಅವಳ್ನ ಸ ಬ್ಯಾಡ ತೇಳ್ತ್. ಅವ್ವಂಗೆ ಅಪ್ಪಂಗೆ ಸಿಟ್ಟ್ ಬಂದ್ ಇವಂಗೆ ಬೈಯ್ಯಕೆ ಸುರುಮಾಡ್ದೊ ಇನ್ನೆಂತ ಗೂಡೆ ಬೇಕ್ ನಿಂಗೆ. ನಾವ್ ನೋಡ್ದ ಗೂಡೆನ ಆದಾದರೆ ಆಗ್. ಇಲ್ಲಂದ್ರೆ ಎಲ್ಲಾರ್ ಹೊರ್ಟ್ ಹೋಗು ತೇಳ್ದೊ. ಮುಂಜ ಮಾತಾಡ್ತ್ಲೆ. ಅಷ್ಟೊತ್ತಿಗೆ ಇನ್ಯಾರೋ ಒಂದು ಗೂಡೆ ಉಟ್ಟ್. ಬಾರಿ ಪೊಳ್ಳ ಉಟ್ಟ್. ನಿಮ್ಮ ಮುಂಜಂಗೆ ಹೇಳಿ ಮಾಡ್ಸಿದಂಗಿಟ್ಟ್. ಟೆಲಿಫೋನ್ ಆಫೀಸ್‌ಲಿ ಕೆಲಸ ತೇಳ್ದೊ. ಆದರ್‍ನ್ನ ಇಂವ ಒಪ್ಪಿಕಿಲೆ. ಕೊನೆಗೆ ಅಪ್ಪಂಗೆ ಸಿಟ್ಟ್ ತಡೆಕಾಗದೆ, ನಿಂಗೆ ಕಲ್ಸಿನೆ ಬುದ್ಧಿ ತೇಳಿ ಎಲ್ಲಾರ್ ಒಂದ್ ಟೀಚರ್ ಗೂಡೆನ ಮಾಡ್ದೊತ ನಿರ್ಧಾರ ಮಾಡಿ ಗೂಡೆ ಹುಡುಕಿದೊ. ಕೊನೆಗೊಂದ್ ಟೀಚರ್ ಗೂಡೆ ಸಿಕ್ಕಿತ್. ಅವಳ್ನ ಆದಿಯುಂತ ಕೇಳ್ದೊ. ಹೈವ ಅವಳ್ನ ಆನೆ ತೇಂಳಿ, ಒಪ್ಪೊಕ !? ಗೂಡೆ ನೋಡಿಕೆ ಸ್ವಲ್ಪನೂ ಲ್ಯಾಕಿಲ್ಲೆ. ಚಿಗ್‌ರ್ ಹುಲ್ಲ್ ತಿಂದ್ ಉರ್‌ಚಿದ ದನಗಳಂಗೆ ಲಾಚಾರ್ ಆಗಿ ಒಣಗಿ ಹೋವ್ಟ. ಅವಳ್ನ ಯಾಕೆ ಇಂವ ಒಪ್ಪಿತ್ ತ ಅವ್ವಂಗೆ–ಅಪ್ಪಂಗೆ ಅದೇ ಗ್ಯಾನ.

ಒಂದ್ ದಿನ ಅದರ್‍ನ್ನ ಕೇಳಕುತೇಂಳಿ ಮುಂಜನ ಕರ್ದ್ ಕೇಳ್ದೊ. ಆಗ ಮುಂಜ ಹೇಳ್ತ್ ! ಡಾಕ್ಟ್ರನ ಆದ್ರೆ ಯಾಗೋಳು 'ಟೇಕ್ ರೆಸ್ಟ್' ತೇಳ್ದೆ. ಟೈಫಿಸ್ಟನ ಆದ್ರೆ ಯಾಗೊಳೂ 'ರೆಡ್ ರಿಬ್ಬನ್' ತೇಳ್ದೆ. ಅದೇ ಟೆಲಿಫೋನ್ ಗೂಡೆ ಯಾಗ ನೋಡ್ರೆ 'ಎಂಗೇಜ್–ಎಂಗೇಜ್' ತೇಳ್ದೆ. ಈ ಟೀಚರ್ ಗೂಡೆನ ಆದ್ರೆ ಉಟ್ಟಲ್ಲ ! ಅವಳು ಏನೇ ಮಾಡ್ರು 'ರಿಫಿಟ್ ಎಗ್ಯೆನ್ ರಿಫಿಟ್ ಎಗ್ಯೆನ್' ತ ಹೇಳ್ದೆ. ಅದಕ್ಕೆ ನಾನ್ ಟೀಚರ್ ಗೂಡೆನೇ ಆದು ತ ಹಠ ಹಿಡ್ದದೆ. ಈ ಮಾತ್‌ಗೆ ಅವ್ವನು ಅಪ್ಪನು ಸುಸ್ತ್. ನೀವ್ ? ○

ಬ್ರೇಕ್ ಫೇಲ್

ಪ್ರಯಾಣಿಕ : ಓ ಹ್, ಅದ್ಭುತಾ ಮಾರ್ವಲೆಸ್, ಅಲ್ಲಾ ಡ್ರೈವರ್ ಇದ್ದಕ್ಕಿದ್ದ ಹಂಗೆ ಬಸ್ಸ್‌ನ ಇಷ್ಟೊಂದು ವೇಗವಾಗಿ ಓಡಿಸುತ್ತೊಳ್ರಿ. ಇಷ್ಟೊಂದು ಎಕ್ಸಪೀರಿಯನ್ಸ್ ನೀವ್ಗೆಲ್ಲಿಂದ ಬಾತ್ ?

ಡ್ರೈವರ್ : ಸಾಕ್ ಸುಮ್ಮನಿರ್... ಬ್ರೇಕ್ ಫೇಲ್ ಆಗಿ ನಾನ್ ಸಾಯ್ತ ಇದ್ದರೆ ಮಧ್ಯಲಿ ನೀನೊಬ್ಬ.

ಏನು ಮಾಡ್ದು

ಮಗ : ಅಮ್ಮಾ ಅಮ್ಮಾ ,ಪೊಪ್ಪ ಇಲಿ ವಿಷನ ನುಂಗಿಬಿಟ್ಟೊ !

ಅಮ್ಮ : ಅಯ್ಯೊ ದೇವರೆ ! ನಾಳೆ ಇಲಿ ಸಾಯ್ಸಿಕೆ ಏನು ಮಾಡ್ದು ?

○ **ಮಳ್ಳನ ವಸಂತ್ ವಿನು,**
ಮಡಿಕೇರಿ.

ಹುತ್ತರಿ ಹಬ್ಬ

ಹಬ್ಬ ಬಾತ್ ಹಬ್ಬ
ನಮ್ಮ ಹುತ್ತರಿ ಹಬ್ಬ
ಹಬ್ಬಲಿ ಎಲ್ಲವುಕೆ ಓಡಾಟ
ಮಕ್ಕಳಿಗೆಲ್ಲ ನಲಿದಾಟ
ನಾಯಿಗಳಿಗೆ ಮಾತ್ರ ನಡುಗಟ ॥ ೧ ॥

ಹಬ್ಬಲಿ ! ಅತ್ತೆ, ಸೊಸೆಗೆ ಸಡಗರ
ತಿಂಡಿ ಮಾಡುವ ಅವಸರ
ಗೂಡೆಗಳಿಗೆ ಅಡಿಗೆ ಮನೆಗೆ ಬಾಕೆ ಮುಜುಂಗರ
ಬಟ್ಟೆ ಮಸಿ ಆದೆತ ಒಬ್ಬ ಮಾತ್‌ಗಾರ
ಕಾರಣ, ನಂಗೆ ಗೊತ್ತ್‌ಲೆ ನೀನ್ ಕೇಳ್‌ರಾ
॥ ೨ ॥

ದೇವ್ರು ದೀಪ ಹಚ್ಚಿದೋ
ಭಕ್ತಿಂದ ಎರಡ್ ಮಾತ್ ಹೇಳಿಕಂಡೋ
ಎಲ್ಲವು "ಪೊಲಿ ಪೊಲಿಯೇ ಬಾ" ತ ಹೇಳಿಕಂಡ್
ಮನೆಂದ ಇಳ್ದೋ
ಪಿಠಾಕಿ ಹೊಡ್ದ್ ನೆಲ ನಡ್‌ಗಿಸಿದೊ
ಕದ್ರ್ ಕೊಯಿದ್ ಮನೆಗೆ ತಂದ್ ಹತ್ತ್‌ಸಿದೋ
॥ ೩ ॥

ಅಮ್ಮ ಗೂಡೆ ಚಕ್ಕುಲಿ ತಂದ್ ಇಟ್ಟತ್
ಮುತ್ತ ಗೂಡೆ ವಡೆ ತಂದ್ ಹಾಕ್ಕಿತ್
ಒಂದರ್‌ಂದ ಒಂದು ವ್ಯಾಜ ವ್ಯಾಲೆ ಬಾತ್
ಕುಂಞಣ್ಣ ಒಂದು ಕುಪ್ಪಿ ತಂದ್ ಇಸಿತ್
ಕುಪ್ಪಿ ಎಲ್ಲರ ಬಾಯಲಿ ಜ್ವಿಲ್ ಸುರ್ಸಿತ್.
॥ ೪ ॥

ಅನ್ನ ಹಾಕಿಕೆ ಮುತ್ತು ಹೋಕನ
ಟೈಗ ನಾಯಿ ಕಾಫಿ ತೋಟಕ್ಕೆ ನುಗ್ಗಿತ್ತ್
ಪಿಟಾಕಿ ಹೊಡ್ದ್‌ದೆತಾ ಹೆದ್ರಿ ಕಂಡಿತ್
ಅನ್ನ ಹಾಕಿಕೆ ನಾಯಿನ ಕರ್ತ್, ಬಾತ್‌ಲಿ ನಾಯಿ
ಸಿಟ್ಟ್ ಬಂದ್ ಗೂಡೆಗೆ, ತಟ್ಟಿನ ಅಲ್ಲೆ ಕುಕ್ಕಿತ್
॥ ೫ ॥

ಕುಂಞಣ್ಣ ಹೈದ ಕುಡ್ದ್
ಬಾಳೆ ಗುಂಡಿಲಿ ಬಿದ್ದಿತ್
ಅವನ ಹೆಣ್ಣು ಮುರ್‌ಟ್‌ಕಂಡ್
ತೋಡ್‌ಲಿ ಹುಡ್‌ಕ್‌ತ್ತಿತ್
ಅವ್ಳ ಮುರ್‌ಟ್‌ಕಂಡ್ ಹುಡ್‌ಕಿಕೆ
ಕಾರಣ ಒಂದಿತ್
ಅವು ಮದ್ವೆ ಆಗಿ, ದಿನ ಎರಡಾಗಿತ್ತ್.
ಅವರ ಮೊದಲ ರಾತ್ರಿ ಅಂದೇ ಆಗಿತ್ತ್ ॥ ೬ ॥

○ **ಕೊಳಂಬೆ ವಿನು ಬೆಳ್ಳಪ್ಪ,** ಕೊಡಗು

ಓ ಕೊಡಗು ಸಂಗಾತಿ

ಓ 'ಕೊಡಗು ಸಂಗಾತಿ' ನಿಂಗೆ ನನ್ನ ವಂದನೆ
ಅಭಿನಂದನೆ

ನಿನ್ನ ಓದಿದವರ ಮನಸ್ಸು ಜಿಂಕೆ ಹಂಗೆ ನಲಿಯಲಿ
ಓ 'ಕೊಡಗು ಸಂಗಾತಿ'

ಇಲ್ಲಿವರೆಗೆ ಎಲ್ಲಿದ್ದೆ ನಿನ್ನ ನಾ ಬಯಸಿದ್ದೆ
ಓ 'ಕೊಡಗು ಸಂಗಾತಿ'

ದ್ವೇಷ ರೋಷ ಎಲ್ಲಾ ಬುಟ್ಟ್ ಧರೆಗೆ ಬಂದ
ಓ ಸಂಗಾತಿ ನಿಂಗೆ ನನ್ನ ವಂದನೆ ಅಭಿನಂದನೆ

ಕ್ಷಣ ಕ್ಷಣಲಿ ನಿನ್ನೊಲುಮೆ ಜಗಕೆಲ್ಲ ತುಂಬಲಿ
ಓ 'ಕೊಡಗು ಸಂಗಾತಿ'

ಕಾಲ ಗರ್ಭದಲ್ಲಿ ಮುಳುಗಿ ಹೋಕೆ ಮುಂದೆ
ಧರೆಗೆ ಬಂದ 'ಸಂಗಾತಿ' ನಿನಗೆ ನನ್ನ
ವಂದನೆ ಅಭಿನಂದನೆ

ದಿಟ್ಟ ದಿಟ್ಟ ಹೆಜ್ಜೆಯಿಟ್ ಮುಂದೆ ಮುಂದೆ
ಬಾ "ಕೊಡಗು ಸಂಗಾತಿ"

○ **ಚೆರಿಯಮನೆ ವೀಣಾ ರಾಜ್‌ಕುಮಾರ್,** ಕಾಟಗೇರಿ

ನಗೆಹನಿ

ಒಬ್ಬ ಯಜಮಾನನ ಮನೆ ಮುಂದೆ ಒಂದು ದೊಡ್ಡ ತೆಂಗಿನಮರ ಬೆಳ್ಸಿತ್ ಆ ಮರಕ್ಕೆ ಒಬ್ಬ ಕಳ್ಳ ಬಾತ್.

ಯಜಮಾನ : ಯಾರ್‌ರ ನೀನ್ ನನ್ನ ತೆಂಗಿನ ಮರಕ್ಕೆ ಹತ್ತುದು

ಕಳ್ಳ : ನಾನ್ ಸ್ವಾಮಿ

ಯಜಮಾನ : ಎಂತದಿಕೆರ ತೆಂಗಿನ ಮರಕ್ಕೆ ಹತ್ತುತಾ ಒಳ

ಕಳ್ಳ : ಹುಲ್ಲು ಕುಯ್ಯಕ್ಕೆ ಸ್ವಾಮಿ

ಯಜಮಾನ : ಅಲ್ಲಿ ಎಲ್ಲಿ ಉಟ್ಟುರ ಹುಲ್ಲು ಮಾರಾಯ

ಕಳ್ಳ : ಅದಿಕ್ಕೆ ಸ್ವಾಮಿ ನಾನು ಇಳಿತ ಒಳೆ.

○ **ಕಾನಡ್ಕ ಎಸ್. ಚರಣ್,** ಮರಗೋಡು.

ಹೆಣ್ಣ್ ಮಕ್ಕ ಯಾಕೆ ಬ್ಯಾಡ ?

ಒಂದು ಮನೇಲಿ ಅಣ್ಣ ತಮ್ಮ ಇಬ್ಬರು ಇದ್ದವೆ. ಆ ಅಣ್ಣನು ತಮ್ಮನು ಇಬ್ಬರು ಸರಿಯಾಗಿ ಮಾತಾಡಿಕಂಬಲೆ. ಅಣ್ಣ ಸ್ವಲ್ಪ ಒಳ್ಳೊಂವ. ತಮ್ಮಂಗೆ ಸ್ವಲ್ಪ ಕೇಡ್ ಜಾಸ್ತಿ. ಹಿಂಗೆ ಇರ್ಕನ ಅಣ್ಣಂದ್ ಮದುವೆ ಆದೆ. ಮದುವೆ ಆದ ಮೇಲೆ ಪಾಪ ಅಣ್ಣನ ಹೆಣ್ಣ್ ಅತ್ತಿಗೆ ಉಟ್ಟಲ, ಅದ್ ಎಷ್ಟ್ ಲಾಯಿಕ ಅಡಿಗೆ ಮಾಡ್ರು ಮೈದಾನಂಗೆ ಕುಷಿಆಲೆ. ಒಂದೊಂದು ಶೂನೆ ಹೇಳ್ತಾ ಇದ್ದದೆ. ಹಿಂಗೆ ಇರ್ಕನ ಅಣ್ಣಂಗೆ ಒಂದು ಹೆಣ್ಣ್ ಕೂಸ್ ಆದೆ. ಆಗ ಅವರ ಮನೆವುಕೆ ಎಲ್ಲ ಸಿಟ್ಟ್. ಹೆಣ್ಣ್ ಕೂಸು ಹುಟ್ಟೆತ್ತುಲಪ್ಪಾತ. ಸರಿ ಆ ಹೆಣ್ಣ್ ಕೂಸಿಗೆ ಒಂದು ವರ್ಷ ಆತ್. ಪುನಃ ಒಂದು ಕೂಸು ಆದೆ. ಅವೂ ಹೆಣ್ಣೆ. ಪಾಪ ಅವರ ಗ್ರಾಚಾರ. ಪುನಃ ಹೆಣ್ಣ್ ಕೂಸು ಹುಟ್ಟತ್ತುಲಾತ ಮನೆಲಿ ಆ ಮಕ್ಕಳ ಕಂಡ್ರೆ ಯಾರಿಗೂ ಆಲೆ. ಆ ಮಕ್ಕ ತುಂಬಾ ಲಾಯಿಕ ಇದ್ದವೆ. ಅವನ ಕಂಡ್ ಇನ್ನೂ ಹೊಟ್ಟೆಕ್ಕಿಚ್ಚ್. ಸರಿ ಹೀಂಗೆ ಒಂದು ಒಂದೂವರೆ ವರ್ಷ ಆದೆ ಪುನಃ ಒಂದು ಕೂಸು ಆದೆ. ಶನಿ ಶನೀತ ಅದೂ ಹೆಣ್ಣೆ. ಈಗ ಹೇಳೋಕಾ. ತಮ್ಮನ ಮತ್ತೆ ಅಜ್ಜಿನ ಬೈಗೊಳ. ನಾಯಿ ಹುಟ್ಟಿಸಿದಂಗೆ ಹುಟ್ಟಿಸಿ ಹಾಕೊಳೋ ಹೆಣ್ಣ್ ಮಕ್ಕಳಾತ ದಿನಾ ಬೈಗಳ ತಪ್ಪಿಕ್ಕೇಲೆ. ಹಿಂಗೆ ಒಂದು ವರ್ಷ ಕಳ್ತ್. ತಮ್ಮನ ಕಂಡ್ರೆ ಅಜ್ಜಿಗೆ ತುಂಬಾ ಕುಷಿ. ಸಣ್ಣ ಮಂಜನೇ ನನ್ನ ಸಾಕು ದೂತ ಹೇಳಿಕೆ ಶುರು ಮಾಡ್ತ್. ಹಿಂಗೆ ಇರ್ಕನ ಸಣ್ಣ ಮಂಜಂದೂ ಮದುವೆ ಅತ್. ಮಂಜ ನೋಡಿಕೆ ಲಾಯಿಕ ಇದ್ದದೆ. ಅಂದರೆ ಸೊಸೆ ನೋಡಿಕೆ ಲಾಯಿಕ ಇಲ್ಲದಿದ್ದರೂ ಹಾಂಕರ ಮಾತ್ರ ಬಾರೀ ಇದ್ದದೆ. ಅಂವ ಮದುವೆ ಆಗಿ 7 ತಿಂಗಳಿಗೆನೇ ಒಂದು ಕೂಸು ಹುಟ್ಟಿದೆ. ಅಂವಂಗೆ ಹುಟ್ಟಿದೂ ಹೆಣ್ಣೆ. ಹಿಂಗಿರ್‌ಕನ ಆ ಕೂಸ್‌ಗೆ ಹೆಂಗೆ ಹುಟ್ಟಿಸಿದೊ ? ಅವು ಮೇಲೆ ಹೇಳಿದ್ದೊಲ್ಲ ಹೆಂಗೆ ಹುಟ್ಟಿಸಿದೊ ? ಎಂತಾ ವಿಚಿತ್ರ ನೋಡಿ ಅವರ್ದ್ ಆಕನ ಮಕ್ಕ. ಅದೇ ಇನ್ನೊಬ್ಬರದ್ ಆಕನ ನಾಯಿಗ. ಹೆಣ್ಣ್ ಹುಟ್ಟೆ ಬುಟ್ರೆ ಎಂತಕೆ ಅಷ್ಟು ಹಿಯಾಳಿಸುದು. ಅವು ಮಕ್ಕ ಅಲ್ಲ. ಅವು ಹೊಟ್ಟೆ ಒಳಗೆಂದನೇ ತಾನೆ ಬಾದು. ಹಿಂಗಿರ್‌ಕನ ಯಾಕೆ ಗಂಡ್ ಹೆಣ್ಣ್ನಾತ ಬೇಧ ಭಾವ. ಪ್ರಪಂಚಲಿ ಹೆಣ್ಣೇ ಇಲ್ಲದಿದ್ದರೆ ಗಂಡ್ ಆಕೆ ಸಾಧ್ಯನ ? ಹೆಣ್ಣೆ ತಾನೆ ನಮ್ಮೆಲ್ಲವರ ಹೆತ್ತ ತಾಯಿ. ಹಿಂಗಿರ್‌ಕನ ಯಾಕೆ ಹೆಣ್ಣ್‌ಮಕ್ಕ ಬ್ಯಾಡ? ದಯವಿಟ್ಟು ಈ ಅಣ್ಣ ತಮ್ಮನಂಗೆ ಯಾರ್ ಮಾಡ್‌ಬಡಿ.

○ **ಓಡಿಯಂಡ ಚಿತ್ರಾ ಈರಪ್ಪ,**
ಮೇಕೇರಿ.

ಶಾಮುನ ಕೆಲ್ಸದ ಪಜೀತಿ

ಒಂದ್ ಊರ್ಲಿ ಶಾಮು ತ್ರೇಳಂವ ಇತ್ತ್. ಅಂವ ಏಳನೇ ಕ್ಲಾಸ್‌ವರೆಗೆ ಓದಿತ್ತ್. ಅವಂಗೆ ಕೆಲ್ಸಕೆ ಸೇರುವ ಆಸೆ. ಆವರೆ ಏನ್ ಮಾಡ್ದು ಈಗ್‌ನ ಕಾಲಲಿ ಎಂ. ಎ. ಆದರೂ ಕೆಲ್ಸಸಿಕ್ಕುದು ಕಷ್ಟ ಉಟ್ಟು. ಅಂಥದರ್‌ಲಿ ಶಾಮುಗೆ ಕೆಲ್ಸ ಸಿಕ್ಸುದು ಉಟ್ಟಾ ? ಒಂದ್ ದಿನ ಅವನ ಫ್ರೆಂಡ್ ಹೇಳ್ತ್. ಬೆಂಗಳೂರಿಗೆ ಹೋದರೆ ಫ್ಯಾಕ್ಟರಿಲಿ ಕೆಲ್ಸ ಸಿಕ್ಕಿದೆಂತ.

ಶಾಮು ಮಾರನೇ ಡಿನನೇ ಕೆಂಪುಬಸ್ಸ್ ಹತ್ತಿತ್. ಪಾಪ ಶಾಮು ಇಡೀ ಬೆಂಗಳೂರ್ ಫ್ಯಾಕ್ಟರಿ ಎಲ್ಲ ಸುತ್ತಿ ಸುತ್ತಿ ಜೋಬ್ ಕಾಲಿಯಾತ್. ಕೆಲ್ಸನೂ ಸಿಕ್ಕಿತ್ಲೆ. ಅವನಕ್ಕಲೆ ಮೈಸೂರ್‌ವರೆಗೆ ಬಾಕೆ ಮಾತ್ರ ದುಡ್ಡಿತ್ತ್. ಮೈಸೂರಿಗೆ ಬಂದ್ ಏನ್ ಮಾಡ್‌ದೂಂತ ಯೋಚಿಸ್ತಾ ಇತ್ತ್. ಶನಿ ಶನಿ ಅಂದ್‌ನ ಪೇಪರ್ಲಿ "ಝೂಲಿ" ಒಂದ್ ಹುಲಿ ಸತ್ತ್ ಹೋವುಟುತ ನ್ಯೂಸಿತ್ತ್. ಆಗ ಅವಂಗೆ ಒಂದು ಉಪಾಯ ಹೊಳ್ತ್. ಅವ ಸೀದ ಝೂಗೆ ಹೋತ್. ಅಲ್ಲಿ ಮ್ಯಾನೆಜರ್ ಹಕ್ಕಲೆ ನಂಗೊಂದು ಕೆಲ್ಸ ಇದ್ದರೆ ಕೊಡಿ, ನಂಗೆ ಸಂಬಳ ಗಿಂಬಳ ಏನು ಬ್ಯಾಡ ಮೂರ್ ಹೊತ್ತ್ ಊಟ ಕೊಟ್ಟರೆ ಸಾಕೂಂತ ಮ್ಯಾನೇಜರ್‌ನ ದಮ್ಮಯ ಹಾಕಿ ಕೇಳಿಕಂತ್. ಮ್ಯಾನೇಜರಿಗೆ ಏನ್ ಮಾಡ್ದುತ ಗೊತ್ತಾತ್ಲೆ. ಅಷ್ಟೊತ್ತಿಗೆ ಮ್ಯಾನೇಜರಿಗೆ ಒಂದ್ ಉಪಾಯ ಹೊಳ್ತ್. ಅಂಥಿಂತೂ ಝೂಲಿ ಒಂದ್ ಹುಲಿ ಸತ್ತ್‌ಟು. ಅದರ ಬದ್ಲ್ ಇವನ ನಿಲ್ಸಿರೆ ಆದೂಂತ ಗ್ಯಾನ ಮಾಡಿ ಅವಂಗೆ ಹುಲಿದ್ ವೇಷ ಎಲ್ಲ ಹಾಕಿ ಬೋನ್‌ಲಿ ಇಟ್ಟೊ. ಹುಲಿ ನೋಡಿಕೆ ದೊಡ್ಡದಾಗಿ ಲ್ಯಾಯ್ಕ ಇತ್ತ್. ಎಲ್ಲವೂ ಹುಲಿನ ನೋಡಿಕೆ ಬಂದೋ. ಹುಲಿಯೋ ಜೋರ್ ಜೋರಾಗಿ ಘರ್ಜಿಸಿಕೆ ಸುರ್‌ಮಾಡ್ತ್. ಇದ್ನ ನೋಡ್ದ ಪಕ್ಕದ ಬೋನ್‌ನ ಸಿಂಹಕೆ ಯಾಕೋ ಸಂಶಯ. ಅದ್ಕೆ ಸಿಂಹ ಹುಲಿದ್ ಬೋನ್‌ಗೆ ಹಾರಿಕೆ ಪೇಚಾಡ್‌ತಿತ್ತ್. ಇದ್ರ ನೋಡಿ ಹುಲಿಗೆ ಹೆದ್‌ರಿಕೆ ಆಗಿ ಬೊತ್ತ್. ಜೋರಾಗಿ ಬೊಬ್ಬೆ ಹಾಕಿಕೆ ಸುರ್ ಮಾಡ್ತ್. ಇದ್ ಬೊಬ್ಬೆ ಹಾಕುದ್ನ ನೋಡಿ ಸಿಂಹ ಹೇಳ್ತ್, ಹುಲಿಗೆ ಮೆಲ್ಲೆ ಬೊಬ್ಬೆ ಹಾಕ್. ನಿನ್ನಂಗೆ, ನಾನ್ ಬಂದ್ ಒಂದುವಾರ ಆತ್‌ತ ಹೇಳ್ತ್. ಎಲ್ಲಾರ್ ನೀವು ಹಂಗೆ ಮಾಡಿ ಬುಡ್ ಬಡಿ ಆತ.

○ **ಅಚ್ಚಲ್ಪಾಡಿ ಬೀನ ಗೋಪಾಲ**
ಗದ್ದಿಗೆ, ಮಡಿಕೇರಿ.

ಅಡ್ವಕೇಟ್ ಜನರಲ್ ಮಾವೋಜಿ ಜನಾರ್ಧನ



ಜನನ : 24-6-1930

ಮರಣ : 12-10-1997

ವಿವರ : 16ನೇ ಸಂಚಿಕೆ ನೋಡಿ

ಮೃತರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲೆಂದು ಅರೆಭಾಷಿಕಾ
ಜನಾಂಗದ ಪರವಾಗಿ ಕೊಡಗು ಸಂಗಾತಿ ಬಳಗದ ಪ್ರಾರ್ಥನೆ

—ಸಂ

ಚಿರಸ್ಮರಣೆ



ಅಮೆ ಎಂ. ಕೃಷ್ಣಪ್ಪ

ನಿವೃತ್ತ ಚಾಲಕರು, ಕೆ. ಎಸ್. ಆರ್. ಟಿ. ಸಿ.
ಚೆಟ್ಟಿಮಾನಿ

ನಿಧನ : ತಾ|| 1-12-1995

ನೀವು ನಿಧನರಾಗಿ ಇಂದಿಗೆ ಎರಡು ವರ್ಷಗಳು ಸಂದವು. ನಿಮ್ಮ ನೆನಪು
ಇಂದಿಗೂ ಚಿರ ಹಸಿರಾಗಿ ಉಳಿದಿದೆ.

ಪತ್ನಿ, ಮಕ್ಕಳು, ಅಳಿಯಂದಿರು
ಮತ್ತು ಮೊಮ್ಮಕ್ಕಳು

K.R.N.N. 240

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12 Published at Mysore, Editor PATTADA P. SHEELAMANI, 322, Hinkal Village & Post, (Near Aralikatte) Mysore-570 017 Phone : 516771